ಗಾದೆ ಪಂಡಿತ ಹು. ಮ. ರಾಮಾರಾಧ್ಯ

ವ್ಯಕ್ತಿ ಪರಿಚಯ



ಪ್ರೊ. ಜಿ. ಅಶ್ವತ್ಥ ನಾರಾಯಣ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೧೧

ಗಾದೆ ಪಂಡಿತ ಹು.ಮ. ರಾಮಾರಾಧ್ಯ

ವ್ಯಕ್ತಿ ಪರಿಚಯ

ಪ್ರೊ. ಜಿ. ಅಶ್ವತ್ಥನಾರಾಯಣ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇಔಟ್,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

GADE PANDITHA HU.MA. RAMARADHYA -
A pen portrait - by Prof. G. ASWATHA NARAYANA.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32. Price : Rs.10 . 2008.

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು : ಕೃತಿಕ ಪ್ರಿಂಟ್–ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು – 560 030
ಮೊಬೈಲ್ – 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಸುಪ್ರಸಿದ್ಧ ವಿದ್ವಾಂಸರಾದ **ಪ್ರೊ. ಜಿ. ಅಶ್ವತ್ಥನಾರಾಯಣ** ಅವರು **ಗಾದೆ ಪಂಡಿತ ಹು.ಮ. ರಾಮಾರಾಧ್ಯ** ಇವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೧-೦೨-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಗಾದೆ ಪಂಡಿತ ಹು.ಮ. ರಾಮಾರಾಧ್ಯ

ಹು.ಮ. ರಾಮಾರಾಧ್ಯ ಎಂಬ ಸಪ್ತಾಕ್ಷರಿ ನಾಮವನ್ನು ಕೇಳಿದವರಿಗೆ ಕಂಡವರಿಗೆ, ತಕ್ಷಣ ನೆನಪಾಗುವುದು ಗಮಕಿ ರಾಮಾರಾಧ್ಯರು ಎಂದಾದರೆ, ಮತ್ತೆ ಕೆಲವರಿಗೆ ಗಾದೆಗಳ ರಾಮಾರಾಧ್ಯರು, ಇನ್ನು ಕೆಲವರಿಗೆ ಮೇಷ್ಟ್ರು ರಾಮಾರಾಧ್ಯರು, ಇನ್ನೆಷ್ಟೋ ಜನರಿಗೆ ಗಮಕರೂಪಕದ ರಾಮಾರಾಧ್ಯರು ಎಂದೇ ನೆನಪಾಗುತ್ತಾರೆ.

ಗಮಕಕಲೆ ಬೋಧನೆ, ಗಮಕರೂಪಕ ರಚನೆ ಮತ್ತು ಪ್ರದರ್ಶನ, ಗಾದೆಗಳ ಸಂಗ್ರಹ, ಶಾಲಾಮಕ್ಕಳಿಗೆ ಪಾಠಬೋಧನೆ, ಇದರ ಜೊತೆಗೆ ಹರಿಕಥೆ ಮಾಡುವುದು ಮತ್ತು ನಾಟಕ ಆಡಿಸುವುದು ರಾಮಾರಾಧ್ಯರ ಬದುಕಿನ ಕಾರ್ಯ ಕ್ಷೇತ್ರಗಳಾಗಿದ್ದವು. ಆದರೆ ರಾಮಾರಾಧ್ಯರ ವಿಶಿಷ್ಟ ಸೇವೆ ಸಂದಾಯವಾಗಿರುವುದು, ಕನ್ನಡ ಸಾಹಿತ್ಯ ರಂಗಕ್ಕೆ ಮರೆಯಲಾಗದ ಕೊಡುಗೆ ನೀಡಿರುವುದು, ಗಮಕ ರೂಪಕಗಳ ಮೂಲಕ, ಕನ್ನಡ ಗಾದೆಗಳ ಸಂಗ್ರಹದ ಮೂಲಕ. ಈ ಎರಡು ಕ್ಷೇತ್ರದಲ್ಲಿ ಅವರನ್ನು ಮೀರಿಸಿದವರು ಕನ್ನಡ ನಾಡಿನಲ್ಲಿ ಇನ್ನೊಬ್ಬರಿಲ್ಲ ಎಂದರೆ ತಪ್ಪಾಗಲಾರದು.

ರಾಮಾರಾಧ್ಯರು ಎಲ್ಲಂದರಲ್ಲಿ ಕುಳಿತಲ್ಲಿ ನಿಂತಲ್ಲಿ ಓಡಾಡಿದಲ್ಲಿ ಸಿಕ್ಕಸಿಕ್ಕವರಲ್ಲಿ ಅವರ ಧ್ಯಾನ ಗಾದೆಗಳ ಸಂಗ್ರಹದ ಮೇಲಿರುತ್ತಿತ್ತು. ಜೀವಮಾನದ ಉದ್ದಕ್ಕೂ ಗಾದೆಗಳ ಸಂಗ್ರಹದಲ್ಲಿ ಅವರು ನಿರತರಾಗಿದ್ದರು. ಸುಮಾರು 30 ವರುಷಗಳ ಕಾಲ ಕನ್ನಡನಾಡಿನುದ್ದಕ್ಕೂ ಸಂಚರಿಸಿ ಸಿಕ್ಕಸಿಕ್ಕಲ್ಲಿ ಎಲ್ಲ ವರ್ಗದ ಜನರಿಂದ ಗಾದೆಗಳನ್ನು ಸಂಗ್ರಹಿಸಿದವರು ಅವರು.

"ಗಾದೆಗಳು ಜನರ ಬಾಯಲ್ಲಿ ಇರುತ್ತೆ. ಮಾತನಾಡುವಾಗ ಸಂದರ್ಭಾನುಸಾರ ಹೊರಬರುತ್ತೆ. ಅದು ಬಂದಾಗ ಜನರ ನಡುವೆ ಇದ್ದು ಗಬಕ್ಕನೆ ಗುರುತಿಸಿಕೊಳ್ಳಬೇಕು ಗಾದೆಗಳ ಸಂಗ್ರಾಹಕ" ಎಂಬುದು ಅವರ ಧ್ಯೇಯವಾಗಿತ್ತು. ಅದಕ್ಕಾಗಿ ಅವರ ಜೇಬಿನಲ್ಲಿ ಸದಾ ಕಾಗದ ಪೆನ್ಸಿಲ್ ಇರುತ್ತಿತ್ತು. ಯಾರೊಡನೆಯಾದರೂ ಮಾತನಾಡುತ್ತಿದ್ದರೆ, ಮಾತಿನ ಮಧ್ಯೆ ಗಾದೆ ಸುಳಿದು ಬಂದಕೂಡಲೇ "ಹ್ಞಾ ಏನಂದಿರಿ, ಸ್ವಲ್ಪ ತಡೀರಿ" ಎಂದು ಹೇಳಿ ಪೇಪರ್ ಪೆನ್ಸಿಲ್ ತೆಗೆದುಕೊಂಡು ಅವರು ಹೇಳಿದ ಗಾದೆಯನ್ನು ಕೂಡಲೇ ಬರೆದುಕೊಂಡು ತಮ್ಮ ಜೋಳಿಗೆಗೆ ಇಲ್ಲವೇ ಜೇಬಿಗೆ ಸೇರಿಸಿಕೊಳ್ಳುತ್ತಿದ್ದರು. ಇದಕ್ಕೆ ನಿದರ್ಶನವಾಗಿ ಒಂದು ಪ್ರಸಂಗ ನೆನಪಾಗುತ್ತದೆ.

ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗಮಕ ವಿಭಾಗದ ಮುಖ್ಯಸ್ಥರಾಗಿ ಗಮಕರೂಪಕಗಳನ್ನು ಪ್ರದರ್ಶನ ಮಾಡುತ್ತಿದ್ದಾಗ ಅವರೊಡನೆ ಪದೇ ಪದೇ ಮಾತುಕಥೆ ನಡೆಸುವ ಸಂದರ್ಭವೊದಗುತ್ತಿತ್ತು. ಒಮ್ಮೆ ನಾನು ಸಕಲೇಶಪುರಕ್ಕೆ ಭಾಷಣಕ್ಕೆ ಹೋಗಿಬಂದ ಮಾರನೇ ದಿನ ಪರಿಷತ್ತಿನ ಅಂಗಳದಲ್ಲಿ ರಾಮಾರಾಧ್ಯರನ್ನು ಭೇಟಿ ಆದೆ. ಅಲ್ಲಿ ಗಮಕ ವಾಚನದ ಬಗ್ಗೆ ಮಾತನಾಡುತ್ತಾ ಒಂದು ಘಟನೆಯನ್ನು ಪ್ರಸ್ತಾಪಿಸಿದೆ.

ನೋಡಿ ರಾಮಾರಾಧ್ಯರೇ, ಸಕಲೇಶಪುರದಲ್ಲಿ ನನ್ನನ್ನು ವ್ಯವಸ್ಥಾಪಕರು ಒಬ್ಬರ ಮನೆಯಲ್ಲಿ ಇಳಿಸಿದ್ದರು. ಅವರ ಮನೆಯಲ್ಲಿ ತಂದೆ-ಮಗನಿಗೆ ವಾಗ್ವಾದ ನಡೆಯುತ್ತಿತ್ತು. 'ನಾನು ಓದಲು ಮೈಸೂರಿಗೆ ಹೋಗುತ್ತೇನೆ. ಇಲ್ಲೇ ನಾನು ಓದೊಲ್ಲ' – ಮಗ ಹೇಳಿದ. "ಶಾಲಾ ಶಿಕ್ಷಣ ನಮ್ಮ ಹಳ್ಳೀಲೇ ಮುಗಿಸು. ಕಾಲೇಜಿಗೆ ಹಾಸನಕ್ಕೆ ಹೋಗು.

ಆಮೇಲೆ ಬೇಕಾದರೆ ನೀನು ಇಂಜಿನಿಯರೋ, ಡಾಕ್ಟರೋ ಆಗೋಕೆ ಮೈಸೂರಿಗೆ ಹೋಗು" ಅಂದ ತಂದೆ. "ಅದಾಗದಪ್ಪ ನಾನು ಮೈಸೂರಿನಲ್ಲೇ ಚಿಕ್ಕಮ್ಮನ ಮನೇಲಿ ಇದ್ದು ಶಾಲೆ ವಿದ್ಯಾಭ್ಯಾಸ ಮಾಡುತ್ತೇನೆ" – ಎಂದ. ತಂದೆ " ನಿಮ್ಮ ಚಿಕ್ಕಮ್ಮನ ಮನೇಲಿ ಅಷ್ಟು ಅನುಕೂಲ ಇಲ್ಲ. ಕಷ್ಟ ಆಗುತ್ತೆ. ಇನ್ನೊಬ್ಬರಿಗೆ ತೊಂದರೆ ಕೊಡಬಾರದು. ನಮ್ಮ ಸುಖಕ್ಕಾಗಿ ಅಂತ" ತಂದೆ ಪರಿಪರಿಯಾಗಿ ಹೇಳುತ್ತಿದ್ದ. "ಸಾಧ್ಯವಿಲ್ಲ, ನಾನು ಮೈಸೂರಿಗೇ ಹೋಗಬೇಕು. ಹಾಸನಕ್ಕೂ ಹೋಗೊಲ್ಲ" ಎಂದು ರಂಪಮಾಡುತ್ತಿದ್ದ. ಆಗ ಈ ಮಾತುಗಳನ್ನೆಲ್ಲ ನಾನು ಕೇಳುತ್ತಿದ್ದೆ. ಅವರ ತಾತನೂ ಕೇಳುತ್ತಿದ್ದರು. ತಾತ ಅದುವರೆಗಿನ ತಂದೆ–ಮಗನ ಚರ್ಚೆ ಕೇಳಿದವರು "ಕುಂತ್ಕೊಂಡು ಮಲಕ್ಕೋಬೇಕು ಮಗಾ, ದೊಡ್ಡವರ ಮಾತು ದೊಡ್ಡರಸ್ತೆ ಇದ್ದಹಾಗೆ. ಅವರ ಮಾತು ಕೇಳದಿದ್ದರೆ ಅಡ್ಡದಾರಿ ಹಿಡಿದಂಗೆ" ಅಂದರು. ಎಂದು ನಾನು ಹೇಳಿದ ಕೂಡಲೇ ರಾಮಾರಾಧ್ಯರು ಜೇಬಿನಿಂದ ಪೆನ್ಸಿಲ್, ಹಾಳೆ ತೆಗೆದು "ಹ್ಞಾ ಏನಂದ್ರಿ, "ಕುಂತ್ಕೊಂಡು ಮಲಕ್ಕೋಬೇಕು, ದೊಡ್ಡವರ ದಾರಿ ದೊಡ್ಡರಸ್ತೆ ಇದ್ದಹಾಗೆ" ಅಂತ ಬರೆದುಕೊಂಡರು. "ಎಂತಹ ದಿವಿನಾದ ಮಾತು. ಯಾರೇ ಆಗಲಿ ನಿಂತುಕೊಂಡು ಒಮ್ಮೆಗೆ ಮಲಗಾಕೆ ಆಗ್ತತಾ? ಬೀಳ್ತಾರೆ ಅಷ್ಟೇ. ಮೊದಲು ಕುಳಿತುಕೊಳ್ಳಬೇಕು, ಆಮೇಲೆ ಮಲಕ್ಕೋಬೇಕು. ಅವರ ತಂದೆ ಹೇಳಿದ್ದು ಸರಿ. ಹಳ್ಳೀಲಿ ಮೊದಲು ಓದು, ಆಮೇಲೆ ಪೇಟೆಗೆ ಹೋಗು ಅಂತ ಹೇಳಿದ್ದು ಸರಿ" ಎಂದರು.

ರಾಮಾರಾಧ್ಯರು ಗಾದೆಗಳನ್ನು ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿದರು. ಈ ಕೆಲಸವನ್ನು ಏಕಾಂಗಿಯಾಗಿ ಮಾಡಿ 25,000 ಗಾದೆಗಳನ್ನು ಸಂಗ್ರಹಿಸಿದ ಅಪ್ರತಿಮ ಸಾಹಸಿಗಳು. ಕನ್ನಡ ಗಾದೆಗಳ

ಪ್ರಪಂಚಕ್ಕೆ ಗಾದೆಗಳ ಕೋಶವೆಂಬ ಬೃಹದ್ ಗ್ರಂಥವನ್ನು 2 ಭಾಗಗಳಲ್ಲಿ ನೀಡಿದ್ದಾರೆ. ಗಮಕ ರೂಪಕಗಳನ್ನು ಕನ್ನಡಕ್ಕೆ ವಿನೂತನ ಕೊಡುಗೆಯಾಗಿ ನೀಡಿದ ರಾಮಾರಾಧ್ಯರು, ಗಾದೆಗಳನ್ನು ತಾಳ-ರಾಗಗಳಿಗೆ ಹೊಂದಿಸಿ ಪಲ್ಲವಿ ಅನುಪಲ್ಲವಿಗಳೊಡನೆ ಕೀರ್ತನರೂಪದಲ್ಲಿ ಹಾಡಲು ಅನುಕೂಲವಾಗುವಂತೆ ಗಾದೆಗಳ ಗೀತೆಗಳನ್ನು ರಚಿಸಿರುವುದು ಅವರು ಕನ್ನಡಕ್ಕೆ ನೀಡಿದ ಇನ್ನೊಂದು ಕೊಡುಗೆ. ಗಾದೆಗಳಿಗೆ ಒಂದೊಂದು ಹಿನ್ನೆಲೆ ಇರುವಂತೆ ಒಂದೊಂದು ಕಥೆ ಇರುವುದೂ ಉಂಟು. ಅಂಥ ಗಾದೆಗಳ ಕಥೆಗಳನ್ನು ಪ್ರಕಟಿಸಿದ್ದಾರೆ. ಹೀಗೆ ಗಾದೆಗಳ ಭಂಡಾರವನ್ನು ಕನ್ನಡಿಗರಿಗೆ ನೀಡಿರುವ ರಾಮಾರಾಧ್ಯ, ಜಾನಪದ ಕ್ಷೇತ್ರದಲ್ಲಿ ಗಾದೆಗಳ ರಾಮಾರಾಧ್ಯರಾಗಿ ಚಿರಸ್ಮರಣೀಯರಾಗಿದ್ದಾರೆ.

ಜೀವನ : ಕನ್ನಡನಾಡಿನ ಪುಣ್ಯಕ್ಷೇತ್ರಗಳಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ಪ್ರಸಿದ್ಧವಾದುದು. ಐತಿಹಾಸಿಕವಾಗಿ ಮಹತ್ವ ಪಡೆದ ಕ್ಷೇತ್ರವೂ ಆಗಿದೆ. ಇಲ್ಲಿಯ ಶ್ರೀಕಂಠೇಶ್ವರ ದೇವಾಲಯ ಕರ್ನಾಟಕದಲ್ಲೇ ಅತಿದೊಡ್ಡ ದೇವಾಲಯಗಳಲ್ಲಿ ಒಂದಾಗಿದೆ. ನಂಜನಗೂಡಿನ ಪಶ್ಚಿಮ ಭಾಗದಲ್ಲಿ ಇರುವುದೇ ಹುಲ್ಲಹಳ್ಳಿ. ಪುರಾಣದಲ್ಲಿ ತೃಣಬಿಂದು ಮುನಿಗಳ ತಪೋಕ್ಷೇತ್ರವಾದುದರಿಂದ ತೃಣಪುರಿ ಎಂಬ ಹೆಸರು ಬಂತೆಂದು ಹೇಳುತ್ತಾರೆ. ಈ ಹುಲ್ಲಹಳ್ಳಿಯೇ ಪಂಡಿತ ರಾಮಾರಾಧ್ಯರು ಜನಿಸಿದ ಸ್ಥಳ. ವೀರಶೈವ ಕುಟುಂಬಕ್ಕೆ ಸೇರಿದ ಇವರ ಮನೆತನದ ಹಿರಿಯರು ಜ್ಯೋತಿಶ್ಶಾಸ್ತ್ರಪ್ರವೀಣರು. ತಂದೆ ಮಲ್ಲಾರಾಧ್ಯರು ಪ್ರಸಿದ್ಧ ಜ್ಯೋತಿಷಿಗಳಾಗಿದ್ದರು. ತಾಯಿ ಪಾರ್ವತಮ್ಮ ಖ್ಯಾತ ಸಂಗೀತಗಾರ ಮನೆತನದವರು. ಇವರ ಹಿರಿಯ ಮಗನೇ ರಾಮಾರಾಧ್ಯ, 6-4-1907ರಲ್ಲಿ ಜನಿಸಿದರು.

ಶಿಕ್ಷಣವೃತ್ತಿ : ಅಜ್ಜಿ ಅಕ್ಕಮ್ಮಣ್ಣಿ ಅವರ ಪೋಷಣೆಯಲ್ಲಿ ಬಾಲ್ಯ ಕಳೆದ ರಾಮಾರಾಧ್ಯರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹುಲ್ಲಹಳ್ಳಿಯಲ್ಲಿ ಮುಗಿಸಿದರು. ಮುಂದೆ ನಂಜನಗೂಡಿನ ಅಪ್ಪರ್ ಪ್ರೈಮರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಮೈಸೂರಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸುಮಾಡಿ 1926 ರಲ್ಲಿ ಪ್ರಾಥಮಿಕ ಶಾಲಾ ಅಧ್ಯಾಪಕರಾದರು.

ಸರ್ಕಾರಿ ಶಾಲಾ ಅಧ್ಯಾಪಕರಾಗಿ ಪಾಂಡವಪುರ, ರಾವಂದೂರು ಮೊದಲಾದ ಕಡೆ ಕೆಲಸ ಮಾಡಿದನಂತರ, 1942ರಲ್ಲಿ ಕನ್ನಡ ಪರಿಣತಿ ಗಳಿಸಲು ಕನ್ನಡ ಪಂಡಿತ ಪರೀಕ್ಷೆಗೆ ಕುಳಿತು ಉತ್ತೀರ್ಣರಾದರು. ಅನಂತರ ಪ್ರೌಢಶಾಲಾ ಅಧ್ಯಾಪಕರಾಗಿ ನೇಮಕಗೊಂಡರು. 1966 ರಲ್ಲಿ ನಿವೃತ್ತರಾದರು. ಶಿಕ್ಷಕರಾಗಿ ರಾಮಾರಾಧ್ಯರು ಅನೇಕ ವರ್ಷಗಳ ಕಾಲ ಮಲ್ಲೇಶ್ವರಂ ಸರ್ಕಾರಿ ಬಾಲಕರ ಪ್ರೌಢಶಾಲೆಯಲ್ಲೇ ಸೇವೆ ಸಲ್ಲಿಸಿದರು. ಬೆಂಗಳೂರಿನಲ್ಲಿ ಮಲ್ಲೇಶ್ವರದ ಸ್ವಗೃಹದಲ್ಲಿ ಮಗ ವಾಗೀಶ್ ಕುಮಾರ್ ಜತೆಯಲ್ಲಿ ವಾಸಿಸುತ್ತಿದ್ದರು. ಬೆಂಗಳೂರು ಮಲ್ಲೇಶ್ವರದಲ್ಲಿರುವ ಗಾಂಧೀ ಸಾಹಿತ್ಯ ಸಂಘ ಅವರ ಸೇವಾರಂಗವಾಗಿತ್ತು.

ವ್ಯಕ್ತಿತ್ವ : ರಾಮಾರಾಧ್ಯರು ಕೇವಲ ಕೃತಿರಚನೆಗಳಿಂದಲೇ ದೊಡ್ಡವರಾಗಿರಲಿಲ್ಲ, ಬದುಕಿನಲ್ಲಿಯೂ ಆದರ್ಶವ್ಯಕ್ತಿ ಆಗಿದ್ದರು. ಅನೇಕರಿಗೆ ಸ್ಫೂರ್ತಿಯುತರೂ ಮಾರ್ಗದರ್ಶಕರೂ ಆಗಿದ್ದರು. ಜಾನಪದ ಕ್ಷೇತ್ರದಲ್ಲಿ ಒಬ್ಬ ಆದರ್ಶ ಸಂಗ್ರಾಹಕ ಹೇಗಿರಬೇಕು ಎಂಬುದಕ್ಕೆ ಆದರ್ಶಪ್ರಾಯ ವ್ಯಕ್ತಿ ಆಗಿದ್ದರು. ಅವರ ಜೀವನದ ಅನೇಕ ಪ್ರಸಂಗಗಳು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಆಗಿವೆ.

ಆದರ್ಶ ಅಧ್ಯಾಪಕರಾಗಿದ್ದ ಅವರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನವರು ಆಗಿದ್ದರು. ಮಕ್ಕಳಿಗೆ ನಾಟಕ, ಹಾಡು, ಕೋಲಾಟ

ಹೇಳಿಕೊಟ್ಟು ಮನರಂಜನೆ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳೊಂದಿಗೆ ತಾವೂ ಪಾಲ್ಗೊಳ್ಳುತ್ತಿದ್ದರು. ಕೋಲಾಟದಲ್ಲಿ ವಿಶೇಷ ಆಸಕ್ತಿ ಅವರಿಗಿತ್ತು. ಬೆಳ್ಳಗಿನ ಕಚ್ಚೇಪಂಚೆ, ಖಾದಿ ಜುಬ್ಬ, ಮೇಲೊಂದು ಬಣ್ಣದ ವ್ಯಾಸ್ ಕೋಟು, ತಲೆಗೊಂದು ಟೋಪಿ, ಕೈಯಲ್ಲಿ ನಶ್ಯದ ಡಬ್ಬಿ ಹಿಡಿದು ಪ್ರೀತಿ ವಿಶ್ವಾಸಗಳಿಂದ ಅವರು ಮಾತಾಡಿಸಿದರೆ ಎಂಥವರೂ ಆತ್ಮೀಯರಾಗುತ್ತಿದ್ದರು. ಕಟ್ಟು ಶರೀರ, ದಿಟ್ಟ ನಿಲುವು, ಆಕರ್ಷಕ ಮುಖಭಾವದ ಅವರು ಸದಾ ಕಾರ್ಯ ಪ್ರವೃತ್ತರಾಗಿರುತ್ತಿದ್ದರು. ನಿವೃತ್ತರಾದ ಮೇಲೂ ಗಮಕರೂಪಕ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಸರ್ವೋದಯ ಪ್ರೌಢಶಾಲೆಯಲ್ಲಿ ನಿವೃತ್ತಿ ನಂತರ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಚಟುವಟಿಕೆ ಲವಲವಿಕೆಯಿಂದ ಕೂಡಿದ ವ್ಯಕ್ತಿತ್ವ ಅವರದು. ಅಖಿಲ ಕರ್ನಾಟಕ ಪ್ರಥಮ ಗಮಕಸಮ್ಮೇಳನವನ್ನು ಪರಿಷತ್ತು ಏರ್ಪಡಿಸಿದಾಗ, ಅದನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು ರಾಮಾರಾಧ್ಯರು. ಪುಸ್ತಕ ಸಂಗ್ರಹಣೆ ಅವರ ಹವ್ಯಾಸ ಆಗಿತ್ತು. ಅವರ ಪುಸ್ತಕ ಪ್ರೀತಿ ಅನುಕರಣೀಯವಾಗಿತ್ತು.

1970ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಿಸಿದ ಇವರಿಗೆ ಗಮಕ 'ಕಲಾಪ್ರವೀಣ' ಎಂಬ ಪ್ರಶಸ್ತಿಯೂ ಬಂದಿತ್ತು. ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿದ್ದವು.

ಗಾದೆಗಳು ಮತ್ತು ಗಮಕ ಅವರಿಗೆ ಪಂಚಪ್ರಾಣ, ಅವರ ಉಚ್ಛ್ವಾಸ–ನಿಸ್ವಾಸ ಇದ್ದಂತೆ ಎನ್ನಬಹದು. ಅವರ ಆಯುಷ್ಯವೆಲ್ಲ ಇದರಲ್ಲೇ ಸವೆಯಿತು ಎಂದರೆ ತಪ್ಪಿಲ್ಲ. ರಾಮಾರಾಧ್ಯರು ಗಾದೆಗಳ ಸಂಗ್ರಹ ಮಾಡುತ್ತಿದ್ದುದರ ಮಹತ್ವವನ್ನು ನಾಡಿನ ವಿದ್ವಾಂಸರೆಲ್ಲ ಅರಿತಿದ್ದರು. ಕನ್ನಡಕ್ಕೆ ಅಪೂರ್ವ ಕೊಡುಗೆ ಎಂದು ಭಾವಿಸಿದ್ದರು.

20–12–1973 ರಲ್ಲಿ ಅವರು ನಿಧನರಾಗುವ ಕಾಲದಲ್ಲೂ 'ಗಾದೆಗಳು ಗಾದೆಗಳು' ಎಂದು ನುಡಿಯುತ್ತಿದ್ದರಂತೆ. ಕನ್ನಡ ಸಾಹಿತ್ಯ ಪರಿಷತ್ತು ಅವರ ಗಾದೆಗಳ ಮಹಾಕೋಶ ಪ್ರಕಟಿಸಿ ನಾಡಿಗೆ ಉಪಕಾರ ಮಾಡಿತು. ಪರಿಷತ್ತಿಗೆ ರಾಮಾರಾಧ್ಯರು ಸಲ್ಲಿಸಿದ ಸೇವೆಗೆ ಕೃತಜ್ಞತೆಯನ್ನು ಆ ಮೂಲಕ ಸೂಚಿಸಿತು.

ಸಾಹಿತ್ಯಕೃತಿಗಳು : ರಾಮಾರಾಧ್ಯರು ವೈವಿಧ್ಯಮಯ ಕೃತಿಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ಸರಳವಾಗಿ ಬರೆಯಬಲ್ಲ ಪರಿಣಾಮ ಬೀರಬಲ್ಲ ಕೃತಿಗಳ ರಚನೆ ಮಾಡಿದ್ದಾರೆ.

ಗಮಕರೂಪಕಗಳು ಇವರ ವಿಶೇಷ ಕೊಡುಗೆ. ಕಾವ್ಯಗಳನ್ನು ಕೇವಲ ವಾಚನಮಾಡಿ ವ್ಯಾಖ್ಯಾನಿಸುವ ಪದ್ಧತಿ ಅಷ್ಟೇ ನಮ್ಮಲ್ಲಿ ಮೊದಲಿಂದ ನಡೆದುಬಂದಿತ್ತು. ರಾಮಾರಾಧ್ಯರು ಹೊಸ ಬಗೆಯ ಪ್ರಯೋಗವನ್ನು ಈ ಕ್ಷೇತ್ರದಲ್ಲಿ ಮಾಡಿದರು. ಗಮಕ ರೂಪದ ಒಂದು ಬಗೆಯ ಮಿಶ್ರಜಾತಿಯ ರಚನೆ ಇದು. ಗಮಕವೂ ಹೌದು; ರೂಪಕವೂ ಹೌದು. ಗಮಕರೂಪಕದಲ್ಲಿ 10 ರಿಂದ 15 ಮಂದಿ ಕಲಾವಿದರು ತಮ್ಮ ದಿನನಿತ್ಯದ ಉಡಿಗೆಯಲ್ಲಿ ಅರ್ಧ ಚಂದ್ರಾಕಾರವಾಗಿ ಕುಳಿತುಕೊಳ್ಳುವರು. ಇವರಲ್ಲಿ ಕುಳಿತಲ್ಲಿಯೇ ತಾಳಮದ್ದಳೆ ಹಾಗೆ ಹಾಡುವರು, ಸಂಭಾಷಿಸುವರು. ಕಾವ್ಯದ ಪಾತ್ರಗಳನ್ನು ಒಂದಕ್ಕೊಂದು ಹೊಂದಿಸಿ ರಸಘಟ್ಟಗಳನ್ನು ವರ್ಣಿಸಿ ಕಥೆಯ ಎಳೆ ಹರಿಯದಂತೆ ಸರಾಗವಾಗಿ ಮುಂದೂಡುವಂತೆ ಮಾಡಲು ಒಬ್ಬರು ಅಥವಾ ಇಬ್ಬರು ನಿವೇದಕರಿರುತ್ತಾರೆ. ನಿವೇದಕ ಪಾತ್ರದವರು ಸೂತ್ರಧಾರನಂತೆ ಕಥೆಯನ್ನು ಹೆಣೆಯುತ್ತಿರುವಾಗ ನಡುನಡುವೆ ಒಂದಿಬ್ಬರು ಗಮಕಿಗಳು ವರ್ಣನಾ ವಿವರಗಳ ಪದ್ಯಗಳನ್ನು ತಂಬೂರಿ ಶ್ರುತಿಯೊಂದಿಗೆ ಹಾಡುತ್ತಿರುವಾಗ

ಕಥಾಸಂದರ್ಭಕ್ಕೆ ಅಗತ್ಯವಾದ ಪಾತ್ರದವರು ನವರಸಗಳು ಹೊಮ್ಮುವಂತೆ ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಾರೆ. ಹೀಗಾಗಿ ಗಮಕರೂಪಕ ನೋಡಿ-ಕೇಳಿ ಆನಂದಿಸುವ ಕೃತಿ ಆಗಿರುತ್ತದೆ. ಸಾಹಿತ್ಯ ಕೌಶಲ, ವಾಚನ ಮತ್ತು ನಾಟಕೀಯ ಸಾಮರ್ಥ್ಯ ಗಮಕ ಕಲೆಯ ತ್ರಿವೇಣಿ ಸಂಗಮ ಗಮಕ ರೂಪಕವಾಗಿದೆ.

ರಾಮಾರಾಧ್ಯರು ಸುಮಾರು ಮೂವತ್ತಕ್ಕೂ ಹೆಚ್ಚಿನ ಗಮಕ ರೂಪಕಗಳನ್ನು ಬರೆದಿದ್ದಾರೆ. ಅವುಗಳ ಪೈಕಿ ಅಲ್ಲಮ ಪ್ರಭು, ಗಿರಿಜಾ ಕಲ್ಯಾಣ, ಲಾಕ್ಷಾಭವನ, ದಕ್ಷಾಧ್ವರ, ಕೀಚಕವಧೆ, ಗದಾಯುದ್ಧ, ರಾಜಸುಯಾಗ, ದ್ರೌಪದಿ ಸ್ವಯಂವರ ಗಮಕರೂಪಗಳು ಪ್ರಕಟವಾಗಿವೆ.

ಗದ್ಯಕೃತಿಗಳು : ಥಾಮಸ್ ಆಲ್ವಾ ಎಡಿಸನ್, ಆದರ್ಶ ಮಹಿಳಾ ರತ್ನಗಳು, ಜೀವನ ಚರಿತ್ರೆಗಳಾದರೆ, ವೀರಭೂಮಿ ಗ್ರೀಕ್‌ವೀರ ಅಲೆಕ್ಸಾಂಡರ್‌ನನ್ನು ಕುರಿತ ಕಥೆಯಾಗಿದೆ. ವೀರಭಾರತ, ವೀರಭೂಮಿ ಗ್ರಂಥದ ಸಂಗ್ರಹರೂಪವಾಗಿದೆ. ಇನ್ನು ಗದ್ಯಮಣಿಮುಕುರ, ಕನ್ನಡ ಸಾಹಿತ್ಯ ಕೌಸ್ತುಭ, ಸಾಹಿತ್ಯ ಕೌಮುದಿ ಗದ್ಯಗ್ರಂಥಗಳು ಪ್ರೌಢಶಾಲೆಗಳ ಪಠ್ಯಗ್ರಂಥಗಳಾಗಿವೆ. ಧರ್ಮಾಶ್ವಮೇಧ ಕೃತಿ ಜೈಮಿನಿ ಭಾರತದ ಹನ್ನೊಂದು ಕಥೆಗಳ ಸಂಗ್ರಹವಾಗಿದೆ. 'ಸುಧಾ' ಸಂಸ್ಕೃತ ಸುಭಾಷಿತಗಳ ಕನ್ನಡಾನುವಾದದ ಪದ್ಯಸಂಗ್ರಹವಾಗಿದೆ. 'ಶ್ರೀರಾಮ ಮಹಾತ್ಮೆ' ಕೇಶವಭಟ್ಟ ನೆಂಬ ಬ್ರಾಹ್ಮಣನ ಕಥೆ ಆಗಿದೆ. 'ಗಮಕ-ಗಮಕಿ' ಕೃತಿಯಲ್ಲಿ ಬೇಂದ್ರೆ, ಡಿವಿಜಿ ಮೊದಲಾದವರು ಗಮಕ ಕಲೆ ಕುರಿತು ಬರೆದ ಬರಹಗಳಿವೆ. ಇವುಗಳಲ್ಲದೆ ಹರಿಹರನ 'ಗಿರಿಜಾ ಕಲ್ಯಾಣ' ವೆಂಬ ಸಂಗ್ರಹವನ್ನು 'ಗಮಕ ಚಂದ್ರಿಕೆ' ಎಂಬ ಗಮಕಪಠ್ಯವನ್ನು ಸಂಪಾದಿಸಿದ್ದಾರೆ. 'ಬೇಟೆಗಾರನ ಮಗ' ಎಂಬ ಕಥಾಸಂಗ್ರಹವನ್ನು ಅನುವಾದಿಸಿದ್ದಾರೆ.

ಗಾದೆ ಸಾಹಿತ್ಯದ ಕೃತಿಗಳು : ರಾಮಾರಾಧ್ಯರಿಗೆ ಅಜರಾಮರ ಕೀರ್ತಿಯನ್ನು ತಂದುಕೊಟ್ಟಿರುವ ಕೃತಿಗಳೆಂದರೆ ಗಾದೆಗಳನ್ನು ಕುರಿತ ಸಂಗ್ರಹಗಳು ಮತ್ತು ರಚನೆಗಳು. ಗಾದೆಗಳಿಗೆ ಸಂಬಂಧಿಸಿದಂತೆ ಅವರು ರಚಿಸಿದ ಕೃತಿಗಳಲ್ಲಿ ಪ್ರಕಟವಾದವು ನಾಲ್ಕು. 1) ಗಾದೆಗಳ ಗೀತಗಳು, 2) ಗಾದೆಗಳ ಕಥೆಗಳು 3) ಭಂಡಾಟ ಬದುಕಿಸಿತು, ಕೇಣ ಕೆಡಿಸಿತು (ಗಾದೆಗಳಲ್ಲಿ ನಾಟಕ) 4) ಕನ್ನಡ ಗಾದೆಗಳ ಮಹಾಕೋಶ ಭಾಗ–1, 5)ಕನ್ನಡ ಗಾದೆಗಳ ಮಹಾಕೋಶ ಭಾಗ–2.

ಇದಲ್ಲದೆ ಮಕ್ಕಳಿಗಾಗಿ ರಚಿಸಿದ ಮತ್ತು ರಚಿಸಬೇಕಾಗಿದ್ದ ಗಾದೆಕೃತಿಗಳು : 1) ಗಾದೆ ರಾಮಾಯಣ 2) ಗಾದೆಭಾರತ 3)ಗಾದೆಗಳ ಪೌರಾಣಿಕ ಕಥೆಗಳು, 4) ಗಾದೆಗಳಲ್ಲಿ ಕಥೆಗಳು, 5) ಗಾದೆಗಳ ಕಥೆಗಳು, 6) ಗಾದೆಗಳ ಪ್ರಹಸನಗಳು 7) ಗಾದೆಗಳ ವಿಶ್ವರೂಪ ಇತ್ಯಾದಿ.

ಈ ಕೃತಿಗಳ ಪೈಕಿ ಕನ್ನಡ ಗಾದೆಗಳ ಮಹಾಕೋಶ, ಗಾದೆಗಳ ಗೀತಗಳು ಮತ್ತು ಗಾದೆಗಳ ಕಥೆಗಳು – ಈ ಮೂರು ಗ್ರಂಥಗಳನ್ನು ವಿಶೇಷವಾಗಿ ಇಲ್ಲಿ ಚರ್ಚಿಸಿದೆ. ಕನ್ನಡ ನಾಡಿನಲ್ಲಿ ಗಾದೆಗಳ ಕ್ಷೇತ್ರದಲ್ಲಿ ಅನೇಕ ಜಾನಪದ ವಿದ್ವಾಂಸರು ಕೆಲಸಮಾಡಿದ್ದಾರೆ. ಗ್ರಂಥ ಪ್ರಕಟಿಸಿದ್ದಾರೆ. ಆದರೆ ಹು.ಮ. ರಾಮಾರಾಧ್ಯರ ಹಾಗೆ ಬೃಹತ್ ಪ್ರಮಾಣದಲ್ಲಿ ಗಾದೆಗಳನ್ನು ಸಂಗ್ರಹಿಸಿ, ವರ್ಗೀಕರಿಸಿ, ಪ್ರಕಟಿಸಿದವರು; ಅವರಂತೆ ದೀರ್ಘಕಾಲ ಗಾದೆಗಳ ಸಂಗ್ರಹದ ಕ್ಷೇತ್ರಕಾರ್ಯ (30 ವರ್ಷಗಳು) ಮಾಡಿದವರು ಇನ್ನೊಬ್ಬರಿಲ್ಲ.

ಗಾದೆಗಳ ಗೀತಗಳು–1 : 1907ರಲ್ಲಿ ಜನಿಸಿದ ರಾಮಾರಾಧ್ಯರು ತಮ್ಮ 28ನೇ ವಯಸ್ಸಿನವಳಗೆ ಕನ್ನಡದ ಗಾದೆಗಳನ್ನು ಶೇಖರಿಸಲು

ಆರಂಭಿಸಿದರು. ಹೀಗೆ ಸಂಗ್ರಹಮಾಡತೊಡಗಿದ ಗಾದೆಗಳನ್ನು ಕುರಿತು ಬರೆಯಲಾರಂಭಿಸಿದರು. ಇದರ ಫಲವೇ 1960 ರಲ್ಲಿ ಹೊರಬಂದ ಅವರ ಮೊದಲ ಗ್ರಂಥ 'ಗಾದೆಗಳ ಗೀತಗಳು'.

ಗಾದೆಗಳ ಗೀತಗಳನ್ನು ರಚಿಸಲು ಸ್ಫೂರ್ತಿ ದೊರೆತ ಬಗ್ಗೆ ಅವರೇ ಹೇಳಿಕೊಂಡ ಮಾತುಗಳಿವು: "ದಾಸರ ಕೀರ್ತನೆಗಳಲ್ಲಿ ಮಾನ ಹೀನನಿಗಭಿಮಾನವೇಕೆ, ಖ್ಯಾತಿಗೆ ಬಾರದ ವಸ್ತು ಎಷ್ಟಿದ್ದರೇನು? ಮುಂತಾದ ಕೀರ್ತನೆಗಳ ಕೊನೆಯಲ್ಲಿ ಏಕೆ? ಏನು? ಎಂಬ ಪದಗಳನ್ನು ಓದುಗರು ಗಮನಿಸಿರಬಹುದು. ಈ ಪದಗಳೇ ಈ ಗಾದೆಗಳ ಗೀತಗಳ ರಚನೆಗೆ ಸ್ಫೂರ್ತಿಯನ್ನಿತ್ತವು". ಇದರ ಫಲವಾಗಿ ಸಮಾನ ಅರ್ಥ ಮತ್ತು ಶಬ್ದಗಳಿಂದ ಕೂಡಿದ ಇಂತಹ ಗಾದೆಗಳನ್ನು ಸೇರಿಸಿ ಹಾಡುಗಳನ್ನು ಕಟ್ಟಿ ಹಾಡಬಾರದೇಕೆ? ಎಂಬ ಯೋಚನೆ ಹೊಳೆಯಿತು. ಅದರ ಫಲವಾಗಿ 1958ರ ವೇಳೆಗೆ, 'ಹಣೆಯಲಿ ಬರೆದುದನು ಒರೆಸಿದರೆ ಹೋದೀತೆ?' ಎಂಬ ಗೀತೆ ರೂಪುಗೊಂಡಿತು.

28 ನುಡಿಗಳುಳ್ಳ ರಾಗ ಭೀಮ್‌ವಿಲಾಸ್‌ನ ತ್ರಿಶ್ರರೂಪಕ ತಾಳದ ಈ ಗೀತದ ಕೆಲವು ನುಡಿಗಳು ಹೀಗಿವೆ :

ಹಣೆಯಲ್ಲಿ ಬರೆದುದನು ಒರಸಿದರೆ ಹೋದೀತೇ?
ಹಣೆಯಲ್ಲಿ ಬರೆದುದನು ಹಣಿಸಿದರೆ ಸಿಕ್ಕೀತೇ? ॥ಪಲ್ಲವಿ॥

ಬಡಬಡಿಕೆಯಿಂದಲಿ ಒಡಲುರಿಯು ಹೋದೀತೆ
ಒಡೆದು ಹೋದಾ ಹಾಲು ಹೆಪ್ಪಗಾದೀತೆ.

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ
ಸುಡುಗಾಡಿಗ್ಹೋದ ಹೆಣ ತಿರುಗಿ ಬಂದೀತೆ.

ಕೊರಳ ಸುತ್ತಿದ ಹಾವು ಕಚ್ಚದೆ ಬಿಟ್ಟೀತೆ
ದೊರೆಯಾದ ಮಾತ್ರಕ್ಕೆ ನರೆಯು ತಪ್ಪೀತೆ.

ನರಕವು ಉಂಟೆಂದು ಅಳುಕಿದರೆ ತಪ್ಪೀತೆ
ಬರಬಂದಿತೆಂದು ಕಲ್ ಕುದಿಸಲಾದೀತೆ?

ಗಾಂಧೀ ಜಯಂತಿ ಅಂಗವಾಗಿ 4–10–1959ರಲ್ಲಿ ಈ ಗೀತೆಯನ್ನು ಹಾಡಿದಾಗ ಸಿದ್ದವನಹಳ್ಳಿ ಕೃಷ್ಣಶರ್ಮರು ಮುಂದಿನ "ಸಾಹಿತ್ಯದಲ್ಲಿ ಇದೊಂದು ಹೊಸ ಪ್ರಯೋಗವೆನಿಸಬಹುದು. ಶ್ರೋತೃಗಳ ಮೇಲೆ ನೀವು ಹಾಡಿದ ಗೀತೆ ಪರಿಣಾಮವನ್ನು ಬೀರಿತು. ಇವುಗಳ ರಚನೆಯನ್ನು ಮುಂದುವರಿಸಿ" ಎಂದು ಬೆನ್ನುತಟ್ಟಿದರು. ಅನಂತರ ಗಾದೆಗಳ ಗೀತಗಳ ರಚನಾಕಾರ್ಯ ಮುಂದುವರೆದು 58 ಗೀತಗಳ ಸಂಗ್ರಹ ಗ್ರಂಥವಾಗಿ 1960 ರಲ್ಲಿ ಪ್ರಕಟವಾಯಿತು.

ಈ ಗೀತಗಳ ರಚನಾ ಸ್ವರೂಪವನ್ನು ಹೀಗೆ ತಿಳಿಸಿದ್ದಾರೆ: "ಎಲ್ಲ ಗೀತಗಳಿಗೂ ರಾಗಗಳನ್ನು ಕೊಟ್ಟಿದೆ. ಆದರೆ ಗೀತಗಳಲ್ಲಿ ರಸ ಪ್ರಾಧಾನ್ಯವಿಲ್ಲದಿರುವುದರಿಂದ ಯಾವ ರಾಗದಲ್ಲಿ ಬೇಕಾದರೂ ಹಾಡಬಹುದು. ಹೆಚ್ಚು ಚರಣಗಳಿರುವ ಗೀತಗಳನ್ನು ರಾಗಮಾಲಿಕೆಯಲ್ಲಿ ಹಾಡಬಹುದು. ಕೆಲವು ಗೀತಗಳಲ್ಲಿ ಇಪ್ಪತ್ತೈದಕ್ಕೂ ಮೀರಿ ಚರಣಗಳಿವೆ. ಪ್ರತಿಯೊಂದು ಗಾದೆಗಳೂ ಚರಣಗಳೂ ತಮ್ಮ ಅಳತೆಗೆ ಅರ್ಥದಲ್ಲಿ ಸ್ವತಂತ್ರವಾಗಿರುವುದರಿಂದ ಎಷ್ಟುಬೇಕೋ ಅಷ್ಟನ್ನು ಹಾಡಬಹುದು. "ವಿಠ್ಠಲಾಚಾರ್ಯರ ಪುರಾಣ ಬಿಟ್ಟಲ್ಲಿಗೆ".

ಗಾದೆಗಳ ಅರ್ಥಕ್ಕನುಸಾರವಾಗಿ ಗೀತಗಳಿಗೆ ಪಲ್ಲವಿಗಳನ್ನು ನಿರ್ಮಿಸಿ ಚರಣಗಳಿಗೆ ಗಾದೆಗಳನ್ನು ಬಳಸಬಹುದಲ್ಲವೆ ಎಂದೆನಿಸಿತು.

ಪ್ರಾರಂಭದಲ್ಲಿ ಅದರಂತೆ ಐದಾರು ಗೀತಗಳು ರಚನೆಯಾದವು. ಕೊನೆಗೆ ಈ ಉದ್ದೇಶ ಮನಸ್ಸಿಗೆ ಸರಿದೋರದೆ ಮುಂದಿನ ರಚನೆಯಲ್ಲಿ ಪಲ್ಲವಿ ಅನುಪಲ್ಲವಿಗಳೆಲ್ಲಕ್ಕೂ ಗಾದೆಗಳನ್ನೇ ಬಳಸಲಾಯಿತು.

ಸಾಕಷ್ಟು ಪರಿಶ್ರಮ ಚಿಂತನೆಗಳಿಂದ ರಚಿಸಿದ ಈ ಗಾದೆಗಳ ಗೀತಗಳು ಕನ್ನಡದಲ್ಲಿ ಏಕೈಕ ವಿಶಿಷ್ಟ ಗ್ರಂಥವಾಗಿದೆ. ಶಿಷ್ಯ ಸಾಹಿತ್ಯ ರೂಪವಾದ ಕೀರ್ತನ ಮಾಧ್ಯಮಕ್ಕೆ ಜನಪದ ನುಡಿಗಳಾದ ಗಾದೆಗಳನ್ನು ಅಳವಡಿಸಿರುವುದು ಒಂದು ಸಾಹಸವೂ ಹೌದು; ನೂತನ ಪ್ರಯೋಗವೂ ಹೌದು. ದಾಸರ, ಶರಣರ ವಚನಗಳಲ್ಲಿ, ಮಹಾಕವಿಗಳ ಕಾವ್ಯಗಳಲ್ಲಿ ಅಲ್ಲಲ್ಲಿ ಗಾದೆಗಳು ನುಸುಳಿದ್ದರೂ ಗಾದೆಗಳನ್ನಷ್ಟೇ ಬಳಸಿಕೊಂಡು ಗಾದೆಗಳ ಗೀತಗಳನ್ನು ಗ್ರಂಥ ರಚಿಸುವ ಕಾರ್ಯವನ್ನು ರಾಮಾರಾಧ್ಯರಂತೆ ಬೇರಾರೂ ಕನ್ನಡದಲ್ಲಿ ಮಾಡಿದಂತಿಲ್ಲ. ಈ ದೃಷ್ಟಿಯಿಂದ ಇಂದಿಗೂ ಇದು ಕನ್ನಡದಲ್ಲಿ ಏಕೈಕ ಪ್ರಯೋಗವಾಗಿದೆ.

ಗಾದೆಗಳ ಕಥೆಗಳು : ಗಾದೆಗಳ ಸಾಹಿತ್ಯವನ್ನು ವಿವಿಧ ರೀತಿಯಲ್ಲಿ ಬಳಸಿದವರು ರಾಮಾರಾಧ್ಯರು. ಗಾದೆಗಳ ಕೋಶ ರಚಿಸಿದರು ; ಗಾದೆಗಳ ಗೀತಗಳನ್ನು ರಚಿಸಿದರು. ಅಷ್ಟೇ ಅಲ್ಲ ಗಾದೆಗಳಿಂದಲೇ ಎರಡು ಚಿಕ್ಕ ಹಾಸ್ಯ ನಾಟಕಗಳನ್ನು ರಚಿಸಿದರು. 'ಭಂಡಾಟ ಬದುಕಿಸಿತು ಕೇಣ ಕೆಡಿಸಿತು' ಮತ್ತು 'ದೀಪನುಂಗೋ ಅತ್ತೆಗೆ ದೀವಟಿಗೆ ನುಂಗೋ ಸೊಸೆ' ಎಂಬ ನಾಟಕಗಳನ್ನು ರಚಿಸಿದರು. ಅಂತೆಯೇ ಗಾದೆಗಳ ಹುಟ್ಟಿಗೆ ಕಾರಣವಾದ ಅಥವಾ ಗಾದೆಗಳ ಅರ್ಥವನ್ನು ತಿಳಿಸುವ ಕಥೆಗಳನ್ನೂ ಪ್ರಕಟಿಸಿದರು. ಈ ಗಾದೆಗಳ ಕಥೆಗಳನ್ನು ಅವರು ಮಕ್ಕಳಿಗಾಗಿ ರಚಿಸಿದ್ದು ಅವರ ವೈಶಿಷ್ಟ್ಯವಾಗಿದೆ. ನಮ್ಮಲ್ಲಿ ಗಾದೆಗಳ ಅರ್ಥವಿವರಣೆ ಮಾಡಿದ ಪುಸ್ತಕಗಳು ಬಂದಿವೆ. ಶಾಲಾ ಮಕ್ಕಳಿಗಾಗಿ ಬರೆದವು ಈ

ಗ್ರಂಥಗಳು. ಆದರೆ ಮಕ್ಕಳಿಗಾಗಿ ಕಥೆಗಳ ಮೂಲಕ ಗಾದೆಗಳ ಪರಿಚಯ ಮಾಡಿದವು ಕಡಿಮೆ ಎನ್ನಬಹುದು.

ಗಾದೆಗಳ ಕಥೆಗಳನ್ನು "ಕರ್ಮವೀರ ವಾರಪತ್ರಿಕೆಯಲ್ಲಿ ವಾರಕ್ಕೆ ಒಂದರಂತೆ 10–15 ಕಥೆಗಳು ಪ್ರಕಟವಾದವು. ಒಂದೊಂದು ಗಾದೆಗೆ ಒಂದೊದು ಕಥೆಯಂತೆ ಮಕ್ಕಳ ವಿಭಾಗದಲ್ಲಿ ಪ್ರಕಟವಾಯಿತು. ಆಮೇಲೆ ಅದು ಪುಸ್ತಕವಾಗಿ ಪ್ರಕಟವಾಯಿತೆಂದು ಕಾಣುತ್ತದೆ. ಗಾದೆಗಳ ಕಥೆಗಳನ್ನು ರಚಿಸಿದವರಲ್ಲಿ ಅವರೇ ಮೊದಲಿಗರು ಎನ್ನಬೇಕು" ಎನ್ನುತ್ತಾರೆ ಬೆ.ಗೊ.ರಮೇಶರು. ಆದರೆ ಗಾದೆಗಳ ಕಥೆಗಳನ್ನು ಪ್ರಸ್ತಾಪಿಸಿದವರು ದೇವುಡು ಅವರು ಮೊದಲು ಎನ್ನಬೇಕು. 1933 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ಸಂಸ್ಕೃತಿಯ ಮೇಲೆ ಕೊಟ್ಟ ಉಪನ್ಯಾಸಗಳು, ಅನಂತರ ಪುಸ್ತಕ ರೂಪವಾಗಿ 1935ರಲ್ಲಿ ಪ್ರಕಟವಾಯಿತು. ಈ ಗ್ರಂಥದಲ್ಲಿ ಕನ್ನಡ ಗಾದೆಯ ಎರಡು ಕಥೆಗಳನ್ನು ಹೇಳಿದ್ದಾರೆ.

ರಾಮಾರಾಧ್ಯರು ಗಾದೆಗಳ ಮಹಾಕೋಶದಲ್ಲಿ ಒಂದು ಗಾದೆ ಕೊಟ್ಟರೆ ಅದಕ್ಕೊಂದು ಸಂಖ್ಯೆ ಕೊಟ್ಟಿರುತ್ತಾರೆ. ಆ ಸಂಖ್ಯೆಯ ಅಡಿ ಅದೇ ಅರ್ಥದ ಇತರ ಸಮಾನಾರ್ಥಕ ಗಾದೆಗಳನ್ನು ಪ್ರಸ್ತಾಪಿಸುತ್ತಾರೆ. ಭಿನ್ನರೂಪದ ಗಾದೆಗಳನ್ನು ನೀಡುತ್ತಾರೆ.

ಕನ್ನಡದಲ್ಲಿ ಗಾದೆಗಳ ವಿವರಣೆಗಳಿರುವ ಪುಸ್ತಕಗಳಿಗಿಂತ ಗಾದೆಗಳ ಕಥೆಗಳ ಪುಸ್ತಕಗಳು ವಿರಳವಾಗಿವೆ. ಈ ದೃಷ್ಟಿಯಲ್ಲಿ ರಾಮಾರಾಧ್ಯರ ಕೃತಿ ಸ್ವಾಗತಾರ್ಹವಾಗಿದೆ. ಸಾಮಾನ್ಯವಾಗಿ ಗಾದೆಗಳ ಕಥೆಗಳ ಪುಸ್ತಕಗಳೇ ಬೇರೆ, ಗಾದೆಗಳ ವಿವರಣೆಗಳ ಪುಸ್ತಕಗಳೇ ಬೇರೆ, ಗಾದೆಗಳ ಸಂಗ್ರಹಗಳ

ಪುಸ್ತಗಳೇ ಬೇರೆಯಾಗಿ ಪ್ರಕಟವಾಗಿವೆ. ಬೇ.ಗೋ. ರಮೇಶ್ ಅವರು "ನೂರಾರು ಜನಪ್ರಿಯ ಗಾದೆಗಳ ಹಾಗೂ ಅವುಗಳ ವಿಸ್ತೀರ್ಣ ಬರಹ" ಎಂಬ ಗ್ರಂಥದಲ್ಲಿ 17 ಗಾದೆ ಕಥೆಗಳನ್ನು 65 ಗಾದೆ ವಿಸ್ತರಣೆಗಳನ್ನು ಕೊಟ್ಟಿದ್ದಾರೆ.

ಕನ್ನಡ ಗಾದೆಗಳ ಮಹಾಕೋಶ : ಕನ್ನಡ ಜನಪದ ಸಾಹಿತ್ಯದಲ್ಲಿ ಕಾವ್ಯ, ಪದ್ಯ, ಲಾವಣಿ, ಒಗಟು, ಗಾದೆ, ಕಥೆ, ಹಾಡು ಮೊದಲಾದ ನಾನಾ ವಿಮರ್ಶಾ ಪ್ರಕಾರಗಳಿವೆ. ಇವುಗಳನ್ನು ಕುರಿತ ಸಾಹಿತ್ಯ ಸಾಕಷ್ಟಿದೆ. ಈ ಪೈಕಿ ಜನಪದ ಗಾದೆಗಳು ಒಂದು ವಿಶಿಷ್ಟ ಪ್ರಕಾರ.

ಕನ್ನಡದ ಗಾದೆಗಳ ಪುಸ್ತಕಗಳಲ್ಲಿ "ಕನ್ನಡ ಗಾದೆಗಳ ಮಹಾಕೋಶ (2 ಭಾಗಗಳು) ಕನ್ನಡದಲ್ಲಷ್ಟೇ ಅಲ್ಲ ಭಾರತೀಯ ಭಾಷೆಗಳಲ್ಲೇ ಗಾದೆಗಳನ್ನು ಕುರಿತ ಬೃಹತ್ ಗ್ರಂಥಗಳ ಪೈಕಿ ಒಂದಾಗಿದೆ. ಕನ್ನಡದಲ್ಲಿಯೂ ಇದು ತ್ರಿವಿಕ್ರಮಗ್ರಂಥ.

ಕನ್ನಡ ಭಾಷೆಯ ಹಿರಿಮೆ ಸೊಗಸುಗಳನ್ನು ಎತ್ತಿ ಹಿಡಿಯುವುದರಲ್ಲಿ ಕನ್ನಡ ನಾಡಿನ ಜನಜೀವನದ ಅನುಭವಸಾರವನ್ನು ಸಂಕ್ಷಿಪ್ತವಾಗಿ, ಸಾರವತ್ತಾಗಿ, ಸರಳವಾಗಿ, ಸೂಕ್ತಿಮಯವಾಗಿ ನಿರೂಪಿಸುವ ಚೊಕ್ಕವಾಣಿಯೇ ಗಾದೆ. ಇಂಥ ಗಾದೆ ಸಾಹಿತ್ಯ ಜಗತ್ತಿನ ಯಾವ ಗಾದೆ ಸಾಹಿತ್ಯಕ್ಕೂ ಗುಣಮಟ್ಟದಲ್ಲಿ ಕಡಿಮೆಯಿಲ್ಲದೆ ಕನ್ನಡದಲ್ಲಿ ಇದೆ. ಆದರೆ ವಿದೇಶೀ ಭಾಷೆಗಳಲ್ಲಿ ಗಾದೆ ಸಾಹಿತ್ಯದ ಬಗ್ಗೆ ನಡೆದಿರುವ ಶೋಧನೆ, ವಿಶ್ಲೇಷಣೆ, ಪ್ರಕಟನೆ ಕೆಲಸ ಕನ್ನಡದಲ್ಲಿ ನಡೆದಿಲ್ಲ ಎನ್ನಬಹುದು. ಉದಾಹರಣೆಗೆ: ಕನ್ನಡದ ಜನರಲ್ಲಿ ಇರುವ ಬಳಕೆಯ ಗಾದೆಗಳ ಸಂಗ್ರಹವೇ ಪೂರ್ಣವಾಗಿ ನಡೆದಿಲ್ಲ. ಪ್ರಕಟವಾದ ಗಾದೆಗಳು ಪಟ್ಟಿಗಳ

ಹಾಗೆ ಪ್ರಕಟವಾಗಿವೆ. ವಿಶ್ಲೇಷಣೆ ವಿವರಣೆಗಳೊಡನೆ ಪ್ರಕಟವಾಗಿಲ್ಲ. ಅಷ್ಟೇಕೆ ಕನ್ನಡದಲ್ಲಿರುವ ಗಾದೆ ಪುಸ್ತಕಗಳ, ಲೇಖನಗಳ ಸಮಗ್ರ ಸೂಚಿಯೇ ಪ್ರಕಟವಾಗಿಲ್ಲ. ಕನ್ನಡ-ಇಂಗ್ಲಿಷ್ ಸಮಾನಾಂತರ ಗಾದೆಗಳ ಒಂದೆರಡು ಪುಸ್ತಕಗಳು ಇವೆ. ತೆಲುಗು-ಕನ್ನಡ, ತಮಿಳು-ಕನ್ನಡ, ಹಿಂದಿ-ಕನ್ನಡ ಮೊದಲಾದ ಭಾರತೀಯ ಭಾಷೆಗಳೊಡನೆ ಕನ್ನಡದ ಸಮಾನಾಂತರ ಗಾದೆಗಳ ಪುಸ್ತಕಗಳೇ ಬಂದಿಲ್ಲ. ಕನ್ನಡ ಕಾವ್ಯಗಳಲ್ಲಿರುವ ಗಾದೆಗಳನ್ನು ಅಚ್ಚಪ್ಪನವರು, ರಾಮಾರಾಧ್ಯರು, ಇತರರು ಪ್ರಕಟಿಸಿದ್ದಾರೆ. ಆದರೆ ಅವುಗಳ ವಿಶ್ಲೇಷಣೆ ನಡೆದಿಲ್ಲ. ಕಿಟೆಲ್ ಕೋಶದ ಗಾದೆಗಳ ಸಂಗ್ರಹವೇನೋ ಆಗಿದೆ. ಇತರ ಕೋಶಗಳಲ್ಲಿ ಕಂಡುಬರುವ ಗಾದೆಗಳ ಸಂಗ್ರಹವಾಗಿಲ್ಲ. ಅಷ್ಟೇ ಅಲ್ಲ, ಕನ್ನಡದ ಗ್ರಂಥಗಳಲ್ಲಿ ಎಚ್.ಎಲ್.ನಾಗೇಗೌಡರ ಕೃತಿಗಳಲ್ಲಿ, ಗೊರೂರು ಅವರ ಕೃತಿಗಳಲ್ಲಿ, ಇತರ ಸಾಹಿತಿಗಳ ಕೃತಿಗಳಲ್ಲಿ ಬಂದ ಗಾದೆಗಳ ಸಂಗ್ರಹ ಕಾರ್ಯವನ್ನು ಯಾರೂ ಕೈಗೊಂಡಿಲ್ಲ. ಕನ್ನಡ ಗಾದೆಗಳ ಬಗ್ಗೆ ಸಾಕಷ್ಟು ಎಂ.ಫಿಲ್ ಪ್ರಬಂಧಗಳಾಗಲೀ ಪಿಎಚ್.ಡಿ ಮಹಾಪ್ರಬಂಧಗಳಾಗಲೀ ಬಂದಿಲ್ಲ ಎನ್ನಬಹುದು. ಅಚ್ಚಪ್ಪ, ರಾಮೇಗೌಡ, ಇಮ್ರಾಪುರ, ತಪಸ್ವಿ ಕುಮಾರ್ ಮೊದಲಾದ ಕೆಲವರ ಕೃತಿಗಳು ಈ ದೆಸೆಯಲ್ಲಿ ಗಮನಾರ್ಹವಾಗಿವೆ ಎನ್ನಬಹುದು.

ಇಂಥ ಸನ್ನಿವೇಶದ ಹಿನ್ನೆಲೆಯಲ್ಲಿ ರಾಮಾರಾಧ್ಯರ ಕನ್ನಡ ಗಾದೆಗಳ ಮಹಾಕೋಶವನ್ನು ಗಮನಿಸಿದಾಗ ಅದರ ಮಹತ್ವ ಹಿರಿಮೆ ಗರಿಮೆಗಳ ಅರಿವಾಗುತ್ತದೆ. 20,000 ಕ್ಕೂ ಹೆಚ್ಚಿನ ಗಾದೆಗಳನ್ನು ಒಳಗೊಂಡು 1982ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ 1350 ಪುಟಗಳ ಕನ್ನಡ ಗಾದೆಗಳ ಮಹಾಕೋಶ ಗ್ರಂಥ ಕನ್ನಡದಲ್ಲೇ ವಿಶೇಷ ಗ್ರಂಥ

ಎಂಬ ಮಾತನ್ನು ಅರಿಯಬೇಕಾದರೆ ಕನ್ನಡ ಗಾದೆಗಳ ಸಾಹಿತ್ಯದ ಇತಿಹಾಸದತ್ತ ಸ್ವಲ್ಪ ಕಣ್ಣು ಹಾಯಿಸಬೇಕಾಗುತ್ತದೆ.

ಕನ್ನಡದಲ್ಲಿ ಇದುವರೆಗೆ ಸುಮಾರು 55ಕ್ಕೂ ಹೆಚ್ಚಿನ ಗಾದೆಗಳ ಪುಸ್ತಕಗಳು ಪ್ರಕಟವಾಗಿವೆ. ಪ್ರಕಟವಾಗದ ಗಾದೆ ಪುಸ್ತಕಗಳೂ ಇವೆ. ಮೊಟ್ಟಮೊದಲನೇ ಕನ್ನಡ ಗಾದೆ ಪುಸ್ತಕ 160 ವರ್ಷಗಳ ಹಿಂದೆ 1847ರಲ್ಲಿ ಕಲ್ಲಚ್ಚಿನಲ್ಲಿ ಹೆರ್ಮನ್ ಮೋಗ್ಲಿಂಗ್ ಎಂಬ ಮಿಷನರಿಯಿಂದ 'ಕನ್ನಡ ಲೋಕೋಕ್ತಿ ನಿಧಾನ' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಇದರಲ್ಲಿ 151 ಗಾದೆಗಳಿವೆ. 2001 ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಕಲ್ಲಚ್ಚಿನ ಗಾದೆಗಳು' ಎಂಬ ಹೆಸರಿನಲ್ಲಿ ಮೋಗ್ಲಿಂಗರ ಗಾದೆಗಳ ಗ್ರಂಥವನ್ನು ಪುನರ್ಮುದ್ರಿಸಿದ್ದಾರೆ. ಕಲ್ಲಚ್ಚಿನ ಗಾದೆಗಳು ಗ್ರಂಥದಲ್ಲಿ ಅನುಬಂಧವಾಗಿ ಡೇನಿಯಲ್ ಸ್ಯಾಂಡರ್‌ಸನ್ ಸಂಗ್ರಹಿಸಿದ ಗಾದೆಗಳನ್ನು ಕೊಟ್ಟಿದ್ದಾರೆ. ಸ್ಯಾಂಡರ್‌ಸನ್ ಸಂಗ್ರಹಿಸಿದ ಗಾದೆಗಳು ಪ್ರಕಟವಾದದ್ದು ಅವರೇ ಸಂಪಾದಿಸಿದ 2 ಭಾಗಗಳ ಕಥಾ ಸಂಗ್ರಹ ಎಂಬ ಗ್ರಂಥದಲ್ಲಿ ಎಂಬುದು ಎಲ್ಲರಿಗೂ ತಿಳಿದ ಸಂಗತಿ ಆಗಿದೆ. ಏಕೆಂದರೆ ಈ ಕಥಾಸಂಗ್ರಹ ಹತ್ತಾರುವರ್ಷ ಪಠ್ಯಗ್ರಂಥವಾಗಿತ್ತು.

ರಾಮಾರಾಧ್ಯರ ಗ್ರಂಥ ಕನ್ನಡ ಜಾನಪದ ಲೋಕಕ್ಕೆ ಅಪೂರ್ವಕೊಡುಗೆ ಆಗಿರುವುದು ನಾಡಿನ ಪುಣ್ಯ. ಈ ಗ್ರಂಥ ಒಂದು ಸಂಪ್ರಬಂಧ ರಚನೆ ಆಗುವಷ್ಟು ಸಾಮಗ್ರಿಗಳನ್ನು ಒಳಗೊಂಡಿದೆ. ಇಲ್ಲಿ ಕೆಲವು ವೈಶಿಷ್ಟ್ಯಗಳನ್ನಷ್ಟೇ ಗುರುತಿಸಲಾಗಿದೆ.

1. ಗಾದೆಯ ರೂಪಾಂತರಗಳು ಅಥವಾ ಪಾಠಾಂತರಗಳು : ಕನ್ನಡದಲ್ಲಿ ಪ್ರಕಟವಾಗಿರುವ ಬಹುತೇಕ ಗಾದೆಗ್ರಂಥಗಳಲ್ಲಿ ಸಂಗ್ರಾಹಕರು ತಮಗೆ

ದೊರೆತ ರೂಪದಲ್ಲಿ ಗಾದೆಗಳನ್ನು ಪ್ರಕಟಿಸಿದ್ದಾರೆ. ಆದರೆ ರಾಮಾರಾಧ್ಯರು ಬಹುಶಃ ಕನ್ನಡದಲ್ಲಿ ಮೊದಲ ಬಾರಿಗೆ ಪ್ರತಿ ಗಾದೆಯನ್ನು ಕೊಟ್ಟಾಗಲೂ ಅದರ ಸಮಾನಾಂತರವಾದ ಗಾದೆಗಳನ್ನು ಅಥವಾ ರೂಪಾಂತರಗಳನ್ನು ಇಲ್ಲವೇ ಪಾಠಾಂತರಗಳನ್ನು ಕೊಡುತ್ತಾರೆ.

ಉದಾಹರಣೆಗೆ 10443ನೇ ಸಂಖ್ಯೆಯ ಗಾದೆಯನ್ನು ಗಮನಿಸಬಹುದು:

ಗಾದೆ : ಪುಕ್ಕಟೆ ಪುರಾಣವಾದರೆ ಬೆಳಗಿನತನಕವೂ ಕೇಳೋಣ.

1. <u>ಪಗಸಟ್ಟೆ</u> ಪುನುಗು ಅಂದ್ರೆ, ನನಗಿಷ್ಟಿರಲಿ ಅಂದನಂತೆ.
2. <u>ಪುಕ್ಕಟ್ಟೆ</u> ಬುಕ್ಕಿಟ್ಟಾದರೆ ನನಗಷ್ಟು ನನ್ನ ಮೈಗಷ್ಟು.
3. <u>ಪುಗಸಟ್ಟೆ</u> ಪುರಾಣ (ಕೇಳೋಣ ಬಿಡು, ಕಾಸಿಲ್ಲ ಕವಡಿಲ್ಲ).
4. <u>ಪುಕ್ಕಟೆ</u> ಪುನುಗು ಸಿಕ್ಕರೆ ಮೈಗಷ್ಟು ಒರಸಿ ಹೋಗು ಎಂದನಂತೆ.
5. <u>ಪುಕ್ಕಟ</u> ಕುದುರೆ ಆದರೂ ಬಾಯಿ ನೋಡು.
6. <u>ಪುಗಸಟ್ಟೆ</u> ಸಿಕ್ಕರೆ ನಂಗೂ ಇರಲಿ ನಮ್ಮಪ್ಪನಿಗೂ ಇರಲಿ.
7. <u>ಪುಗಸಾಟಿ</u> ಆದರೆ ನಮ್ಮಪ್ಪನಿಗಿಬ್ಬರು, ನನಗೆ ನಾಲ್ಕು ಜನ.
8. ಬಿಟ್ಟಿ ಹೆಣ್ಣು ಸಿಗುವ ಹಾಗಿದ್ರೆ, ನನಗೊಂದು, ನಮ್ಮಪ್ಪನಿಗೊಂದು. ತೆರ ಕೊಟ್ಟು ತರೋ ಹಾಗಿದ್ರೆ ನಮ್ಮಪ್ಪ ಮುದುಕ, ನಾನಿನ್ನು ಹುಡುಗ.
9. ಕಾಸಿಗೊಂದು ಹೆಣ್ಣು ಅಂದ್ರೆ ನನಗೊಂದು, ನಮ್ಮಪ್ಪನಿಗೆರಡು, ನಮ್ಮ ತಾತನಿಗೆ ನಾಲ್ಕು ಇರಲಿ.

2. ಪಾರಿಭಾಷಿಕ ಪದಗಳ ವಿವರಣೆ : ಕನ್ನಡ ಗಾದೆಗಳಲ್ಲಿ ಸಾಕಷ್ಟು ಪಾರಿಭಾಷಿಕ ಪದಗಳ ಬಳಕೆ ಆಗಿರುತ್ತದೆ. ಅವುಗಳ ಅರ್ಥ

ತಿಳಿಯದಿದ್ದರೆ ಗಾದೆಯ ಸೊಗಸು ಅಂತರಾರ್ಥ ತಿಳಿಯುವುದಿಲ್ಲ. ಆದ್ದರಿಂದ ಪಾರಿಭಾಷಿಕ ಪದಗಳ ವಿವರಣೆ ಬೇಕಾಗುತ್ತದೆ. ಮತ್ತು ಈ ವಿವರಣೆಗಳು ಸಾಮಾನ್ಯ ನಿಘಂಟುಗಳಲ್ಲಿ ಸಿಗುವುದಿಲ್ಲ. ಉದಾಹರಣೆಗೆ : ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲೂ ಇಲ್ಲದ ಅರ್ಥವಿವರಣೆಯನ್ನು ರಾಮಾರಾಧ್ಯರು ನೀಡುವುದನ್ನು ಕಾಣಬಹುದು. ಉದಾಹರಣೆಗೆ 4903ನೇ ಗಾದೆಯನ್ನು ಗಮನಿಸಬಹುದು:

ಗಾದೆ : ಆಯನೋಡಿ ಪಾಯಹಾಕು.

ರಾಮಾರಾಧ್ಯರು ತಮ್ಮ ಗಾದೆಗಳ ಕೋಶದಲ್ಲಿ ಕೊಟ್ಟಿರುವ ಅರ್ಥದ ಟಿಪ್ಪಣಿ ಇದು:

“ಮನೆಯ ಯಜಮಾನ ಕೈಯ ಮೊಳದಿಂದಾಗಲಿ, ಗೇಣಿನಿಂದಾಗಲಿ ಗೃಹ ನಿರ್ಮಾಣದ ಸ್ಥಳದ ಉದ್ದಳತೆ ಸಂಖ್ಯೆಯನ್ನು ಅಡ್ಡಳತೆ ಸಂಖ್ಯೆಯಿಂದ ಗುಣಿಸಿದರೆ ಕ್ಷೇತ್ರಪದ ಸಂಖ್ಯೆ ಬರುತ್ತದೆ. ಈ ಸಂಖ್ಯೆಯನ್ನು 7 ರಿಂದ ಗುಣಿಸಿ 8 ರಿಂದ ಭಾಗಿಸಿದರೆ ಉಳಿದ ಶೇಷವೇ ಆಯ. ಈ ಆಯ ಸಂಖ್ಯೆ 1 ಆದರೆ ಧ್ವಜಾಯ=ಉತ್ತಮ, 2 ಆದರೆ ಧೂಮ್ರಾಯ=ಕನಿಷ್ಠ, 3 ಆದರೆ ಸಿಂಹಾಯ=ಮಧ್ಯಮ, 4 ಆದರೆ ಶುನಕಾಯ=ಕನಿಷ್ಠ, 5 ಆದರೆ ವೃಷಭಾಯ=ಉತ್ತಮ, 6 ಆದರೆ ಖರಾಯ=ಕನಿಷ್ಠ, 7 ಆದರೆ ಗಜಾಯ=ಮಧ್ಯಮ, 8 ಆದರೆ ಕಾಕಾಯ=ಕನಿಷ್ಠ. ಈ ವಿವರಣೆಗೆ ಆಯನಿರ್ಣಯ ಎಂದು ಹೇಳಿದ್ದಾರೆ.

ಕನ್ನಡ ನಿಘಂಟಿನಲ್ಲಿ ಇರುವ ಸಮಾಸ ಪದಗಳು ಅನೇಕವಿವೆ. ಆಯಕಟ್ಟು, ಆಯಗೆರೆ, ಆಯಗಾಲು, ಆಯಗಾರ, ಆಯಗಾರ್ತಿ,

ಆಯಸಾಣಿ, ಆಯವರಿ, ಆಯಸ್ವಾಮ್ಯ, ಆಯರಾಶಿ, ಆಯವಿದ್ಯೆ, ಆಯವಿಡು, ಆಯತಪ್ಪು, ಆಯಗಾಣು ಮೊದಲಾದ ಪದಗಳಿವೆ. ಆಯನಿರ್ಣಯ ಇಲ್ಲ. ಹೀಗೆ ಕನ್ನಡಕೋಶಕ್ಕೆ ಸೇರಬೇಕಾದ ಪದಗಳು ಸಾಕಷ್ಟು ರಾಮಾರಾಧ್ಯರ ಈ ಕೋಶದಲ್ಲಿವೆ.

3. ಕಠಿಣ ಪದಗಳಿಗೆ ಅರ್ಥಸೂಚನೆ : ಗಾದೆಗಳಲ್ಲಿ ಬರುವ ಅನೇಕ ಪದಗಳು ಜನಬಳಕೆಯ ಅರ್ಥ ಒಳಗೊಂಡಿರುತ್ತವೆ. ಹಾಗೂ ಪ್ರಾದೇಶಿಕ ಅರ್ಥ ಇರುತ್ತದೆ. ಬೇರೆ ಪ್ರದೇಶದವರಿಗೆ ಅರ್ಥವಾಗುವುದಿಲ್ಲ. ಎಷ್ಟೋ ವೇಳೆ ನಿಘಂಟುಗಳಲ್ಲಿ ಸರಿಯಾದ ಅರ್ಥ ಸಿಗುವುದಿಲ್ಲ. ರಾಮಾರಾಧ್ಯರು. ತಮ್ಮ ಗಾದೆ ಕೋಶದಲ್ಲಿ ಅನೇಕ ಕಡೆ ಅಲ್ಲಲ್ಲೇ ಕಠಿಣ ಪದಗಳಿಗೆ ಅರ್ಥಕೊಡುತ್ತಾರೆ.

ಗಾದೆ : ಅಳಿಯ ಹುಟ್ಟಿ ಮಾವನಿಗೆ ಕೇಡು
ನಳಿಯ ಹುಟ್ಟಿ ಅಗೆಗೆ ಕೇಡು.
(ನಳಿಯ=ಕಳೆಗಿಡ ಅಗೆ=ಭತ್ತದ ಪೈರು)

3. ಪಾಠಾಂತರಗಳ ಸೂಚನೆ : ಸಾಮಾನ್ಯವಾಗಿ ಗಾದೆಗಳು ಅಚ್ಚಾಗಿ ಚಲಾವಣೆ ಆಗುವುದಿಲ್ಲ. ಬಾಯಿಂದ ಬಾಯಿಗೆ ಚಲಿಸುತ್ತವೆ. ಸ್ಥಳದಿಂದ ಸ್ಥಳಕ್ಕೆ ಜನರ ಮಾತಿನಲ್ಲಿ ಬಳಕೆಯಾಗುತ್ತವೆ. ಆದ್ದರಿಂದಲೇ ತೋಂಡಿ ಸಂಪ್ರದಾಯ ಜಾನಪದದ ಜೀವಾಳವಾಗಿದೆ. ಜನರಿಂದ ಜನರಿಗೆ ಗಾದೆಗಳು ವರ್ಗಾಯಿಸುವಾಗ ಪದ ವಾಕ್ಯ ಉಚ್ಚಾರ ಎಲ್ಲ ಪಾಠಾಂತರಗಳಾಗಿ ರೂಪುಗೊಳ್ಳುತ್ತವೆ.

ಉದಾ : ಇದ್ದಮಕ್ಕಳೇ ಎಣ್ಣೆ ಬೆಣ್ಣೆ ಕಾಣವು
ಇನ್ನೊಂದು ಕೊಡೆಯಾ ಕಣ್ಣು ಕಾಣದ ದೈವವೇ
(ಗಾದೆ ಸಂಖ್ಯೆ 7196)

ಪಾಠಾಂತರ 1 : ಇದ್ದಮಕ್ಕಳಿಗೇ ಕೂಳಿಲ್ಲ, ಇನ್ನೊಂದು ಕೊಡೋ (ಸದಾಶಿವ, ಸದ್ಗುರು) ಶಿ(ಬ)ವರಾಯ.

ಪಾಠಾಂತರ 2 : ಒಂದು ಕೂಸೇ ಎಣ್ಣೆ ಬೆಣ್ಣೆ ಕಾಣ್ದು
ಇನ್ನೊಂದು ಕೊಡೆ (ಹೊನ್ನೆತ್ತವ್ವ!) ಹೊನ್ನವ್ವ!

ಪಾಠಾಂತರ 3 : ಮುಂದೆ ಹುಟ್ಟಿದ ಮಗು ಎಣ್ಣೆ ಬೆಣ್ಣೆ ಕಾಣದು ಇನ್ನೊಂದು ಕೊಡೋ ಪರಮೇಶ್ವರ.

ಪಾಠಾಂತರ 4 : ಮೊದಲನೇ ಮಗುವಿಗೇ ಊಟಕ್ಕೆ ಗತಿಯಿಲ್ಲ
ಮತ್ತೆ ಹುಟ್ಟಿದ್ದಕ್ಕೆ ತುಲಾಭಾರ ಮಾಡಿಸ್ತೀನಿ ಅಂತ ಹರಕೆ ಹೊತ್ತ.

ಪಾಠಾಂತರ 5 : ನೆನ್ನೆ ಈದವ್ಕೆ ಬಟ್ಟೆ ಇಲ್ಲ ; ಇನ್ನೂ ಹನ್ನೆರಡು ಕೊಡೋ ನನ್ ಬನ್ನಹಳ್ಳಿ ಮಂಚಮ್ಮ ಅಂತಿದ್ಲಂತೆ.

ಈ ಪಾಠಾಂತರಗಳಲ್ಲಿ ಅಕ್ಷರಪಾಠಾಂತರವನ್ನು ಶಿ(ಬ)ವರಾಯ ಎಂಬಲ್ಲಿ, ಪದಪಾಠಾಂತರವನ್ನು (ಹೊನ್ನೆತ್ತವ್ವ) ಹೊನ್ನವ್ವ ಎಂಬಲ್ಲಿ, ಪಾಠಾಂತರ 2 ಮತ್ತು 3 ರಲ್ಲಿ ವಾಕ್ಯ ಪಾಠಾಂತರವನ್ನು ಕಾಣಬಹುದು.

ಗ್ರಂಥ ಸಂಪಾದನಾ ಶಾಸ್ತ್ರದ ದೃಷ್ಟಿಯಲ್ಲಿ ಮಹತ್ವದ ಪಾಠಾಂತರಗಳ ನಿದರ್ಶನಗಳು ಈ ಗ್ರಂಥದಲ್ಲಿ ಸಿಗುವುದು ಒಂದು ವಿಶೇಷ. ಜಾನಪದ ಗ್ರಂಥಗಳ ಪಾಠಾಂತರಗಳ ಅಧ್ಯಯನ ವಿಶೇಷವಾಗಿ ನಮ್ಮಲ್ಲಿ ನಡೆದಿಲ್ಲ. ಅದಕ್ಕೆ ವಿಪುಲ ಸಾಮಗ್ರಿ ಈ ಗ್ರಂಥದಲ್ಲಿದೆ.

4. ಅನ್ಯ ಭಾಷೆಗಳ ಸಮಾನಾರ್ಥಕ ಗಾದೆಗಳು : ಕನ್ನಡದಲ್ಲಿ ಗಾದೆಗಳಿಗೆ ವಿವಿಧ ಭಾಷೆಗಳ ಸಮಾನಾರ್ಥಕ ಗಾದೆಗಳನ್ನು ಹೋಲಿಸಿ ವಿಶೇಷ

ಅಧ್ಯಯನ ನಡೆದಿಲ್ಲ. ಅದಕ್ಕೆ ಬೇಕಾದ ಸಮಾನಾರ್ಥಕ ಅನ್ಯಭಾಷೆಗಳ ಸಂಗ್ರಹ ಸಾಕಷ್ಟು ಆಗಿಲ್ಲ. 'ನಾಲ್‌ನುಡಿ ನಾಣ್ಣುಡಿ' ಗಾದೆಗಳ ಸಂಗ್ರಹದ ಪುಸ್ತಕದಲ್ಲಿ ಮಾತ್ರ ತಮಿಳು, ತೆಲುಗು, ಮಲಯಾಳ ಭಾಷೆಗಳ ಸಮಾನಾರ್ಥಕ ಗಾದೆಗಳನ್ನು ಕೊಡಲಾಗಿದೆ. ರಾಮಾರಾಧ್ಯರು ತಮ್ಮ ಕೋಶದಲ್ಲಿ ಅಲ್ಲಲ್ಲಿ ಕೊಡಗು, ತುಳು, ಹವ್ಯಕ ಮೊದಲಾದ ಉಪಭಾಷೆಗಳ ಸಮಾನಾರ್ಥಕ ಗಾದೆಗಳನ್ನು ಬಹುಶಃ ಮೊದಲಬಾರಿಗೆ ಕನ್ನಡದಲ್ಲಿ ಅಲ್ಲಲ್ಲಿ ಕೊಟ್ಟಿದ್ದಾರೆ.

5. ಅಶ್ಲೀಲ ಗಾದೆಗಳು : ಜನಪದ ಭಾಷೆ ಜನಜೀವನದಲ್ಲಿ ಜನರು ಸಹಜವಾಗಿ ಮಾತನಾಡುವ ಭಾಷೆ. ನಮ್ಮ ವಾಸಸ್ಥಾನದಲ್ಲಿ ತಿಪ್ಪೆಗುಂಡಿ ಕಸ ಅನಿವಾರ್ಯವಿದ್ದಂತೆ ಅಶ್ಲೀಲಭಾಷೆ ಜನರ ಭಾಷೆಯಲ್ಲಿ ಕಂಡುಬರುತ್ತದೆ. ಜೀವನದಲ್ಲಿ ತಿಪ್ಪೆಗುಂಡಿ, ಕಸವನ್ನು ಪ್ರದರ್ಶನ ಮಾಡುವುದಿಲ್ಲ. ಹಾಗಾಗಿ ಶಿಷ್ಟಭಾಷೆಯ ಜನ ಅಶ್ಲೀಲಭಾಷೆ ಪದ ಬಳಸೊಲ್ಲ. ಅದಕ್ಕೆ ಗಂಭೀರ ರೂಪ ಕೊಟ್ಟು ಅಲಂಕಾರಿಕ ಭಾಷೆ ಬಳಸುತ್ತಾರೆ. ಆದರೆ ಜನಸಾಮಾನ್ಯರಿಗೆ ಕೆಳವರ್ಗದವರಿಗೆ ಮುಚ್ಚುಮರೆ ಏನೂ ಇರೋಲ್ಲ, ಮುಗ್ಧರು, ಸರಳರು, ಪ್ರಾಮಾಣಿಕರು, ಕಪಟವರಿಯದವರು. ಅವರ ಭಾಷೆಯೂ ಹಾಗೇನೇ. ಆದ್ದರಿಂದ ಅವರಿಗೆ ಅಶ್ಲೀಲ ಅನ್ನಿಸುವುದಿಲ್ಲ. ಶಿಷ್ಟರಿಗೆ ಅನ್ನಿಸುತ್ತದೆ.

ರಾಮಾರಾಧ್ಯರು ಜನರು ಗಾದೆಗಳನ್ನು ನಿತ್ಯಜೀವನದಲ್ಲಿ ಹೇಗೆ ಬಳಸುತ್ತಾರೋ ಹಾಗೆಯೇ ದಾಖಲಿಸಿದ್ದಾರೆ. ಇದು ಜಾನಪದ ಸಂಗ್ರಾಹಕರ ಕರ್ತವ್ಯವೂ ಹೌದು. ಶಿಷ್ಟಗಾದೆಗಳಂತೆಯೇ ಅಶಿಷ್ಟ ಗಾದೆಗಳನ್ನೂ ದಾಖಲಿಸಿದ್ದಾರೆ.

6. ಗ್ರಾಮೀಣ ಬದುಕಿನ ವಿವರಗಳ ನಿರೂಪಣೆ : ಗಾದೆಗಳು ಬಹುತೇಕ ಗ್ರಾಮ ಜೀವನದಲ್ಲಿ ಬಳಕೆ ಹೆಚ್ಚು, ನಗರ ಜೀವನದಲ್ಲಿ ಪಾಶ್ಚಾತ್ಯ ಸಂಸ್ಕೃತಿ ಪ್ರಭಾವದಿಂದ ಗಾದೆಗಳ ಬಳಕೆ ಕಡಿಮೆ ಎನ್ನಬಹುದು. ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ಮೂಡಿಬಂದ ಗಾದೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಸಾಕಷ್ಟು ವಿವರಣೆ ಬೇಕಾಗುತ್ತದೆ. ರಾಮಾರಾಧ್ಯರು ಕೇವಲ ಗಾದೆಗಳನ್ನಷ್ಟೇ ಸಂಗ್ರಹಿಸಿಲ್ಲ. ಅವುಗಳ ಬಗ್ಗೆ ಟಿಪ್ಪಣಿಗಳನ್ನೂ ಸಂಗ್ರಹಿಸಿಕೊಟ್ಟಿದ್ದಾರೆ.

ಉದಾಹರಣೆ : ಗಾದೆ ಸಂಖ್ಯೆ 4884 ಗಮನಿಸಿ.
ಏಡಿ ಹೆಚ್ಚಿದ ಕೆರೆ ಹಾಳು ; ಕೋಡಗ ಹೆಚ್ಚಿದ ವನ ಹಾಳು.

ಟಿಪ್ಪಣಿ : ನಳ್ಳಿಗಳು (ಏಡಿಗಳು) ಏರಿಯನ್ನು ಕೊರೆದು ತೂತುಮಾಡಿ ಅದರ ಸಾಮರ್ಥ್ಯವನ್ನು ಕಡಿಮೆ ಮಾಡುವುವು. ಕೋತಿಗಳು ರೆಂಬೆಗಳನ್ನು ಮುರಿದು ವನವನ್ನು ಹಾಳುಮಾಡುವುವು.
ಗಾದೆ ಸಂಖ್ಯೆ 2752 : ತಿಂದರೆ ದಕ್ಕದು ಮಂದೆ ಹಣ

ಟಿಪ್ಪಣಿ : ಕುರಿಗೊಬ್ಬರ ಹೊಲಕ್ಕೆ ಸಿಗಲಿ ಎಂದು ಕುರಿ ಮಂದೆಗಳನ್ನು ರೈತರು ತಮ್ಮ ಹೊಲಗಳಲ್ಲಿ ತಂಗಿಸಿ ಕುರುಬರಿಗೆ ಊಟ ತಿಂಡಿ, ಹಣ ಕೊಡುವುದು ವಾಡಿಕೆ. ಈ ಪ್ರತಿಫಲವನ್ನು ಕೊಡದೆ ಮೋಸಮಾಡಿದರೆ ಅದು ದಕ್ಕದು.

ಗಾದೆ 891 : ಬಿದ್ದಕಲ್ಲು, ನಿಂತಕಲ್ಲು, ಗುಂಡುಕಲ್ಲು (ಯಾರಿಗೆ ಕೈಮುಗಿದರೂ ಮೋಕ್ಷ ಖಾತ್ರಿ).

ಬಿದ್ದಕಲ್ಲು=ಶ್ರೀ ರಂಗನಾಥ. ನಿಂತಕಲ್ಲು=ವೆಂಕಟರಮಣ.
ಗುಂಡುಕಲ್ಲು=ನಂಜುಂಡೇಶ್ವರ.

7. ವಿದೇಶೀ ಗಾದೆಗಳು :

ಕನ್ನಡದಲ್ಲಿ ಮೊದಲಬಾರಿಗೆ ಅನ್ಯದೇಶೀಯ ಗಾದೆಗಳನ್ನು ಸಾಕಷ್ಟು ಪ್ರಮಾಣದಲ್ಲಿ (478 ಗಾದೆಗಳನ್ನು) ಕನ್ನಡದಲ್ಲಿ ಕೊಟ್ಟವರು ರಾಮಾರಾಧ್ಯರು. ಇಂಗ್ಲಿಷ್, ಸ್ಕಾಟ್ಲೆಂಡ್, ಸ್ಪೇಯಿನ್, ದಕ್ಷಿಣ ಅಫ್ರಿಕಾ, ಇಟಲಿ, ರಷ್ಯ, ಈಜಿಪ್ಟ್, ರುಮೇನಿಯಾ ಮೊದಲಾದ ವಿದೇಶಗಳ ಗಾದೆಗಳನ್ನು ಅನುವಾದದ ರೂಪದಲ್ಲಿ ಕೊಟ್ಟಿದ್ದಾರೆ.

ಅನ್ಯದೇಶೀಯ ಗಾದೆಗಳಲ್ಲಿ ಇಂಗ್ಲಿಷ್ ಮೂಲದೊಡನೆ ಸಾಕಷ್ಟು ಹಿಂದೆಯೇ ಕನ್ನಡದಲ್ಲಿ ಪ್ರಕಟವಾಗಿವೆ. ಅವುಗಳನ್ನು ಆಧರಿಸಿ ಸಮಾನಾರ್ಥಕ ಕನ್ನಡ ಗಾದೆಗಳನ್ನು ಇಂಗ್ಲಿಷ್ ಅನುವಾದಕ್ಕೆ ಕೊಡಬೇಕಾಗಿತ್ತು.

ರಾಮಾರಾಧ್ಯರು ಇಂಗ್ಲಿಷ್ ಮೂಲಗಾದೆಗಳನ್ನು ಕೊಟ್ಟಿಲ್ಲ. ವಿದೇಶಿ ಗಾದೆಗಳನ್ನು ಅನುವಾದದ ಮೂಲಕ ಕೊಟ್ಟಿರುವುದರಿಂದ ಒಂದು ಲಾಭವಿದೆ. ಜಗತ್ತಿನ ಗಾದೆಗಳ ಜ್ಞಾನಭಂಡಾರಕ್ಕೆ ಕನ್ನಡ ಗಾದೆಗಳ ಭಂಡಾರ ಹೋಲಿಸಿ ತೌಲನಿಕ ಅಧ್ಯಯನ ಮಾಡಲು ಅವಕಾಶವಾಗಿದೆ.

ರೋಮನ್ ಜಿಪ್ಸಿ ಆಫ್ರಿಕಾ ಡಚ್ ವೇಲ್ಸ್, ಐರ್ಲೆಂಡ್, ಹೀಬ್ರೂ, ದಶ್ತೋ, ಈಜಿಪ್ಟ್ ಮೊದಲಾದ ದೇಶ ಭಾಷೆಗಳ ಗಾದೆಗಳನ್ನು ಬಹುಶಃ ಮೊದಲ ಬಾರಿಗೆ ಕನ್ನಡದಲ್ಲಿ ಬಳಸಿದೆ ಎನ್ನಬಹುದು.

ಭಾರತೀಯ ಭಾಷೆಗಳ ಮತ್ತು ವಿವಿಧ ಪ್ರಾಂತಗಳ ಗಾದೆಗಳು ಇಲ್ಲಿವೆ. ತೌಲನಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ.

8. ಸ್ಥಳನಾಮ ಅಧ್ಯಯನಕ್ಕೆ ಸಹಕಾರಿ : ಸ್ಥಳದ ಐತಿಹ್ಯಗಳನ್ನು ಗುರುತಿಸಲು ಗಾದೆಗಳು ನೆರವಾಗುತ್ತವೆ. ಗಾದೆಗಳು ಲೋಕಸಂಚಾರ ಹೇಗೆ ಮಾಡುತ್ತವೆ ಎಂಬುದು ಕುತೂಹಲಕಾರಿ ಅಂಶ. ಆಯಾ ಸ್ಥಳನಾಮಗಳಿಗೂ ವ್ಯಕ್ತಿನಾಮಗಳಿಗೂ ಸಂಬಂಧವಿರುತ್ತದೆ ಎಂಬುದನ್ನು ಅನೇಕರು ಗಮನಿಸಿಲ್ಲ. ಉಡುಪಿ ಸ್ಥಳೀಯ ಜನ ಅಯ್ಯಂಗಾರ್ ಎಂಬ ಕುಲನಾಮ ಸೇರಿಸಿಕೊಳ್ಳುವುದಿಲ್ಲ. ಮೇಲುಕೋಟೆಯ ಸ್ಥಳೀಯ ಜನ ಮಧ್ವಾಚಾರ್ಯ ಎಂದಾಗಲಿ, ಶಿವಯ್ಯಾಚಾರ್ ಎಂದಾಗಲಿ ಹೆಸರಿಟ್ಟುಕೊಳ್ಳುವುದಿಲ್ಲ. ಪ್ರಾದೇಶಿಕ ಸಂಸ್ಕೃತಿಗೆ ಅನುಗುಣವಾಗಿ ಸ್ಥಳನಾಮ ವ್ಯಕ್ತಿನಾಮಗಳು ಹೊಂದಿಕೊಂಡಿರುತ್ತದೆ. ಇದಕ್ಕೆ ಸಾಕಷ್ಟು ನಿದರ್ಶನ ರಾಮಾರಾಧ್ಯರ ಗಾದೆಗಳ ಸಂಗ್ರಹದಲ್ಲಿದೆ.

ಉದಾಹರಣೆಗೆ 12730ನೇ ಗಾದೆಯನ್ನು ಗಮನಿಸಬಹುದು. ಈ ಗಾದೆಯ ಸಮಾನಾರ್ಥಕ ಗಾದೆಗಳಲ್ಲಿ ಈ ಅಂಶ ವಿದಿತವಾಗುತ್ತದೆ.

ಗಾದೆ 12730 : ಶಿಡ್ಲ ಕಡಬಕ್ಕೆ ಹೋದಹಾಗೆ.

1. ಆದೆಯ ಭಟ್ಟ ಸ್ವಾದಿಗೆ ಹೋದಹಾಗೆ.
2. ಕುಟ್ಟಿ ಕುಂದಾಪುರಕ್ಕೆ ಹೋದಹಾಗೆ.
3. ಮಾರಾಬೋಯಿ ಮದ್ದೂರಿಗೆ ಹೋದಹಾಗೆ.
4. ವೆಂಕು (ಯೆಂಕು) ಪಣಂ (ಪೆಡಂ) ಬೂರಿಗೆ ಹೋದಹಾಗೆ.
5. ಸೋದೆಗೆ ಪ್ರಬು ಹೋದಹಾಗೆ.
6. ಸಣ್ಣಮಲ್ಲ ಸಂತೆಗೆ ಹೋದಹಾಗೆ.
7. ಮಾರುಬಯ್ಯ ಮದ್ದೂರಿಗೆ ಹೋದಹಾಗೆ.

ಇಲ್ಲಿ ಸೋದೆ=ಪ್ರಭು, ಕುಟ್ಟಿ=ಕುಂದಾಪುರ, ಮಾರಾಬೋಯಿ=ಮದ್ದೂರು ಪದಗಳಲ್ಲಿ ಸ್ಥಳನಾಮ–ವ್ಯಕ್ತಿನಾಮಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ಸಾಮ್ಯ ಕಾಣಬಹುದು.

9. ಗಾದೆಗಳ ವರ್ಗೀಕರಣ : ಸಾಮಾನ್ಯವಾಗಿ ಸ್ಥಳಾನುಸಾರ, ವೃತ್ತಿ ಅನುಸಾರ, ವಿಷಯಾನುಸಾರ ಅಥವಾ ಅಕಾರಾದಿಯಾಗಿ ಗಾದೆಗಳನ್ನು ವರ್ಗೀಕರಿಸಿಕೊಡುತ್ತಾರೆ. ಆದರೆ ರಾಮಾರಾಧ್ಯರು ತಮ್ಮದೇ ಆದ ಸಂಕೀರ್ಣ ಪದ್ಧತಿಯನ್ನು ಅನುಸರಿಸಿದ್ದಾರೆ.

15584 ಗಾದೆಗಳನ್ನು (ಈ ಸಂಖ್ಯೆಯಲ್ಲಿ ಅಡಿಟಿಪ್ಪಣಿಗಳಲ್ಲಿ ಕೊಟ್ಟಿರುವ ಸಮಾನಾರ್ಥಕ ಗಾದೆಗಳು ಸೇರಿಲ್ಲ) 8 ವಿಭಾಗಗಳಲ್ಲಿ ವರ್ಗೀಕರಿಸಿಕೊಟ್ಟಿದ್ದಾರೆ. 1. ಅಧ್ಯಾತ್ಮಿಕ (ತಾತ್ವಿಕ), 2. ರಾಜಕೀಯ, 3. ಶೈಕ್ಷಣಿಕ, 4. ಸಾಮಾಜಿಕ, 5. ಕೌಟುಂಬಿಕ, 6. ಔದ್ಯೋಗಿಕ, 7. ಗುಣಶೀಲಸ್ವಭಾವ, 8. ಸಂಕೀರ್ಣ.

ಅನುಬಂಧವಾಗಿ 1. ಇಂದಿನ ಕೆಲವು ಗಾದೆಗಳು (ಆಧುನಿಕ ಗಾದೆಗಳು) 2. ಅನ್ಯದೇಶೀಯ ಗಾದೆಗಳು, 3. ಅನ್ಯಭಾಷೀಯ ಗಾದೆಗಳು, 4. ಅಂತರ ಭಾರತೀಯ ಭಾಷೆಗಳ ಗಾದೆಗಳು, 5. ಕಾವ್ಯಪ್ರಯೋಗಗಳು (ಕಾವ್ಯಗಳಲ್ಲಿ ಬಂದ ಗಾದೆಗಳು) ಎಂದು ವರ್ಗೀಕರಿಸಿಕೊಟ್ಟಿದ್ದಾರೆ.

ಈ ಮುಖ್ಯ ವಿಭಾಗಗಳಲ್ಲಿ ಅನೇಕ ಉಪವಿಭಾಗಗಳಿವೆ. ಉದಾಹರಣೆಗೆ ಅಧ್ಯಾತ್ಮಿಕ ವಿಭಾಗದಲ್ಲಿ ಪಾಪ–ಪಾಪಿ, ನರಕ–ಪುಣ್ಯ, ನಾಶ, ವಿಧಿ, ಕರ್ಮ, ಆಪತ್ತು ಗ್ರಹಚಾರ, ಅನಿಷ್ಟ, ಸಾವು, ಏಕಾದಶಿ, ಯಜ್ಞ, ಒಪ್ಪೊತ್ತು ಇತ್ಯಾದಿ ಹತ್ತಾರು ಉಪವಿಭಾಗಗಳಿವೆ.

ಈ ಉಪವಿಭಾಗಗಳಲ್ಲಿ ಮರಿ ವಿಭಾಗಗಳಿವೆ. ಉದಾಹರಣೆಗೆ ಯಾತ್ರೆ ಎಂಬ ಉಪವಿಭಾಗದಲ್ಲಿ ಕಾಶಿ, ತಿರುಪತಿ, ಗೋಕರ್ಣ, ಬೇಲೂರು, ಸಿದ್ಧಗಂಗಾ, ಮಕ್ಕಾ, ಶಿವಗಂಗೆ, ಹಂಪೆ ಇತ್ಯಾದಿ.

ಅನುಬಂಧಗಳು ವಿಶೇಷವಾದ ಸಂಗತಿಗಳನ್ನು ಒಳಗೊಂಡಿವೆ. ಅನುಬಂಧ 3 ರಲ್ಲಿ ಗಾದೆಗಳ ಕಾವ್ಯ ಪ್ರಯೋಗಗಳು ಎಂಬ ಶೀರ್ಷಿಕೆಯಲ್ಲಿ 1157 ಗ್ರಂಥಸ್ಥಗಾದೆಗಳನ್ನು ಕೊಟ್ಟಿದ್ದಾರೆ. ಕನ್ನಡದಲ್ಲಿ ಅಚ್ಚಪ್ಪ, ಬೆಂಗೇರಿ, ವಿದ್ಯಾಶಂಕರ್ ಅವರು ಗ್ರಂಥಸ್ಥಗಾದೆಗಳ ಸಂಗ್ರಹ ತಂದಿದ್ದಾರೆ. ಇದರಲ್ಲಿ ಅಚ್ಚಪ್ಪನವರ ಗ್ರಂಥಸ್ಥಗಾದೆಗಳು ಬೃಹತ್ತಾದುದು ಮತ್ತು ಕನ್ನಡದಲ್ಲಿ ಈ ಬಗೆಯ ಸಂಗ್ರಹಗಳಲ್ಲಿ ಮೊದಲನೆಯದು. ಅಚ್ಚಪ್ಪನವರ ಸಂಗ್ರಹದಲ್ಲಿ ಗಾದೆಗಳಲ್ಲದ ಸೂಕ್ತಿಗಳೂ ಸೇರಿಕೊಂಡಿವೆ. ಅಚ್ಚಪ್ಪನವರು ಗ್ರಂಥಾನುಸಾರ ಎಂದರೆ ಆದಿಪುರಾಣದ ಗಾದೆಗಳು, ಕುಮಾರವ್ಯಾಸಭಾರತದ ಗಾದೆಗಳು ಇತ್ಯಾದಿ ಸಂಗ್ರಹಿಸಿ ಕೊಟ್ಟಿದ್ದಾರೆ. ಬೆಂಗೇರಿ ಅವರು ಮತ್ತು ವಿದ್ಯಾಶಂಕರ್ ಅವರು ಅಕಾರಾದಿಕ್ರಮದಲ್ಲಿ ಗಾದೆಗಳನ್ನು ಕೊಟ್ಟಿದ್ದಾರೆ. ಆದರೆ ರಾಮಾರಾಧ್ಯರು ಕನ್ನಡದ ಒಂದು ಗಾದೆಯನ್ನು ಕೊಟ್ಟು ಅದರ ಸಮಾನಾರ್ಥಕ ಗಾದೆಗಳನ್ನು ಅದರಡಿಯಲ್ಲೇ ವಿವಿಧ ಗ್ರಂಥಗಳಿಂದ ಆರಿಸಿಕೊಟ್ಟಿದ್ದಾರೆ. ಇದು ಹೆಚ್ಚು ಉಪಯುಕ್ತವಾದ ಕ್ರಮವಾಗಿದೆ. ಇದರಿಂದ ಒಂದು ಗಾದೆಯನ್ನು ಕಾಲಕಾಲಕ್ಕೆ ನಮ್ಮ ಕನ್ನಡ ಕವಿಗಳು ಹೇಗೆ ಬಳಸಿಕೊಂಡಿದ್ದಾರೆ ಎಂಬುದು ತಿಳಿಯುತ್ತದೆ.

ಆಕರಸೂಚಿ ವಿಧಾನ : ಗಾದೆಗಳ ಕಾವ್ಯ ಪ್ರಯೋಗಗಳು ವಿಭಾಗದಲ್ಲಿ ಕನ್ನಡ ಸಾಹಿತ್ಯದ ನಾನಾ ಗ್ರಂಥಗಳಿಂದ ಗಾದೆಗಳನ್ನು ಆಯ್ದುಕೊಟ್ಟಿದ್ದಾರೆ. ಒಂದು ರೀತಿಯಲ್ಲಿ 19ನೇ ಶತಮಾನದ ವರೆಗಿನ ಕನ್ನಡ ಸಾಹಿತ್ಯವನ್ನೇ

ಜಾಲಾಡಿದ್ದಾರೆ ಎನ್ನಬಹುದು. ಆದರೆ ಆಕರ ಸೂಚಿಸುವ ವಿಧಾನ ಸಮರ್ಪಕವಲ್ಲ. ಆಕರ ಗ್ರಂಥಗಳನ್ನು ಸೂಚಿಸುವ ವಿಧಾನವೊಂದಿದೆ. ಪ್ರತಿ ಆಕರ ಗ್ರಂಥಕ್ಕೂ ಸಂಕೇತ ಅಕ್ಷರಗಳನ್ನೋ ಸಂಕ್ಷೇಪರೂಪಗಳನ್ನೋ ಕೊಟ್ಟು ಪುಟ ಅಧ್ಯಾಯ ಶ್ಲೋಕ ಸಂಖ್ಯೆ ಇತ್ಯಾದಿ ಕೊಡಬೇಕು. ಆದರೆ ಇಲ್ಲಿ ಯಾವುದೇ ಒಂದು ವಿಧಾನವನ್ನು ಕ್ರಮಬದ್ಧವಾಗಿ ಅನುಸರಿಸಿಲ್ಲ.

ಈ ಸಂಗ್ರಹದಲ್ಲಿ ಆಕರಸೂಚಿ ವಿಧಾನ ವೈಜ್ಞಾನಿಕವಾಗಿಯಾಗಲೀ ಗ್ರಂಥಸಂಪಾದನಾ ಶಾಸ್ತ್ರದ ರೀತ್ಯಾ ಆಗಲೀ ಜಾನಪದ ಶಾಸ್ತ್ರ ರೀತ್ಯಾ ಆಗಲೀ ಪರಿಷ್ಕಾರವಾಗಿ ಪ್ರಕಟವಾಗಿಲ್ಲ. ಇದರಲ್ಲಿ ರಾಮಾರಾಧ್ಯರ ತಪ್ಪೇನಿಲ್ಲ. ಅವರು ಮುಖ್ಯವಾಗಿ ಜನಪದ ಗಾದೆಗಳ ಸಂಗ್ರಹಕಾರರು. ಜಾನಪದ ಶಾಸ್ತ್ರದ ಬಗ್ಗೆ, ಗ್ರಂಥಸಂಪಾದನೆ ಬಗ್ಗೆ, ಸಾಕಷ್ಟು ಅರಿವು ಇದ್ದರೂ ಓದಿದ ವಿದ್ವಾಂಸರಲ್ಲ. ಈ ಕಾರಣದಿಂದ ಕೆಲವು ಲೋಪದೋಷಗಳನ್ನು ಕಾಣುತ್ತೇವೆ.

ಕನ್ನಡ ಗಾದೆಗಳ ಸಂಖ್ಯೆ : ಗಾದೆಗಳ ಸಂಖ್ಯೆ ಕನ್ನಡದಲ್ಲಿ ಎಷ್ಟು ಎಂಬುದನ್ನು ನಿಖರವಾಗಿ ಹೇಳಲಾಗದು. ಏಕೆಂದರೆ ಗ್ರಂಥಸ್ಥಗಾದೆಗಳನ್ನೇ ಲೆಕ್ಕಹಾಕಿಲ್ಲ. ಇನ್ನು ಬಳಕೆಯಲ್ಲಿರುವ, ದಿನಬೆಳಗಾದರೆ ನಿರ್ಮಾಣವಾಗುತ್ತಿರುವ ಗಾದೆಗಳ ಲೆಕ್ಕ ಇಟ್ಟವರಾರು? ಆದರೂ ಸಹ ಒಂದು ಅಂದಾಜಿನ ಪ್ರಕಾರ ನಮ್ಮಲ್ಲಿಗಿಂತ ವಿದೇಶೀ ಭಾಷೆಗಳಲ್ಲಿ ಅಧಿಕ ಸಂಖ್ಯೆಯ ಗಾದೆಗಳಿರುವುದನ್ನು ನಂ. ತಪಸ್ವೀ ಕುಮಾರ್ ತಮ್ಮ 'ಕನ್ನಡ ಗಾದೆಗಳ ಸಮೀಕ್ಷೆ' ಗ್ರಂಥದಲ್ಲಿ (ಪು : 190–112) ವಿವರಿಸಿದ್ದಾರೆ.

ಅವರು ಕನ್ನಡ ಗಾದೆಗಳ ಸಂಖ್ಯೆ ಕುರಿತು ಹೇಳಿದ ಮಾತುಗಳಿವು: ಇದುವರೆಗೆ ಸಂಗ್ರಹಿತವಾಗಿ ಪ್ರಕಟಗೊಂಡಿರುವ ಕನ್ನಡ ಗಾದೆಗಳ ಸಂಖ್ಯೆ

ಹೆಚ್ಚೆಂದರೆ 8–10 ಸಾವಿರವಾಗಬಹುದು. ಅಂದಾಜಿನಂತೆ 10–15 ಸಾವಿರ ಆಗಬಹುದು ಎಂದು 1972ರಲ್ಲಿ ಹೇಳಿದ್ದಾರೆ. ಆಗ ರಾಮಾರಾಧ್ಯರ ಗ್ರಂಥ ಪ್ರಕಟವಾಗಿರಲಿಲ್ಲ. ಅವರ ಗಾದೆಗಳ ಸಂಗ್ರಹದ ವಿಷಯ–ವಿವರಗಳು ತಿಳಿದಿರಲಿಲ್ಲವೇನೋ. ಈ ಸಂದರ್ಭದಲ್ಲಿ ಡಾ. ರಾಗೌ ಅವರು ಹೇಳಿದ ಮಾತುಗಳು ಮನನೀಯವಾಗಿವೆ:

"ನಮ್ಮ ಲೇಖಕರು ಇನ್ನೂ ಹತ್ತಾರು ವರುಷಗಳು ಉಳಿದ ಕೆಲಸವನ್ನು ಕೈಬಿಟ್ಟರೂ ಸರಿಯೇ, ಈ ಕೆಲಸವನ್ನು (ಗಾದೆ ಸಂಗ್ರಹಣೆ, ವಿಶ್ಲೇಷಣೆ, ವಿವೇಚನೆ) ಅಗತ್ಯವಾಗಿ ಮಾಡಬೇಕಾಗಿದೆ". ರಾಗೌ ಅವರ ಮಾತಿನಂತೆ ಈ ಕೆಲಸವನ್ನು ಬೇರಾವ ಜನಪದ ಸಾಹಿತಿಗಳೂ ಮಾಡದಿದ್ದಾಗ ರಾಮಾರಾಧ್ಯರು ಏಕಾಂಗಿಯಾಗಿ ಹತ್ತಾರು ವರುಷ ಉಳಿದ ಕೆಲಸದ ಜತೆಗೇ ಮಾಡಿದರು. ಶಿವರಾಮ ಕಾರಂತರು ಅಧ್ಯಕ್ಷಭಾಷಣವೊಂದರಲ್ಲಿ (ಸುವರ್ಣ ಸಂಚಯ ಪು : 117) ಹೇಳಿದಂತೆ "ಕನ್ನಡದಲ್ಲಿ ಏನೆಂದರೂ 20–25 ಸಾವಿರ ಗಾದೆಗಳು ಜೀವಂತವಾಗಿವೆ ಎಂದು ಊಹಿಸಬಹುದು" ಎಂದ ಮಾತನ್ನು ರಾಮಾರಾಧ್ಯರು ನಿಜಮಾಡಿದರು ತಮ್ಮ ಜೀವಿತಕಾಲದಲ್ಲಿ.

ಕಲ್ಲಚ್ಚಿನ ಗಾದೆಗಳ ಸಂಪಾದಕರು ಕನ್ನಡದಲ್ಲಿ ಸುಮಾರು 50,000 ಗಾದೆಗಳು ಇರುವುದು ಕಂಡುಬಂದಿದೆ ಎಂದಿದ್ದಾರೆ. ಆ ಮಾತನ್ನು ನಿಜಮಾಡಲು ಇನ್ನೊಬ್ಬ ಮಹಾಪುರುಷ ಬರುವವರೆಗೆ ಹು.ಮ. ರಾಮಾರಾಧ್ಯರೊಬ್ಬರೇ ಕನ್ನಡ ಗಾದೆಗಳ ಅಧಿಕ ಸಂಗ್ರಹಣದ ಚಕ್ರವರ್ತಿಗಳಾಗಿದ್ದಾರೆ ಎನ್ನಬಹುದು.

* * *

ಗಾದೆ ಪಂಡಿತ ಹು.ಮ. ರಾಮಾರಾಧ್ಯರ ಕೃತಿಗಳು

ಕಾವ್ಯ

1. ಸುಧೆ (ಅನುವಾದಿತ ಕವನಗಳು)
2. ಗಾದೆಗಳ ಗೀತಗಳು (ಕೀರ್ತನೆಗಳು)
3. ಗಮಕ ಚಂದ್ರಿಕೆ

ಜೀವನಚರಿತ್ರೆ

4. ಥಾಮಸ್ ಆಲ್ವ ಎಡಿಸನ್
5. ಆದರ್ಶ ಮಹಿಳಾ ರತ್ನಗಳು

ಕಥಾ ಸಾಹಿತ್ಯ

6. ವೀರಭೂಮಿ
7. ವೀರಭಾರತ
8. ಧರ್ಮಾಶ್ವಮೇಧ
9. ಶ್ರೀರಾಮ ಮಹಾತ್ಮೆ
10. ಬೇಟೆಗಾರನ ಮಗ (ಅನುವಾದ)
11. ಗಾದೆಗಳ ಕಥೆಗಳು

ಗಾದೆಗಳ ಕಥೆಗಳು

12. ಅಲ್ಲಮ ಪ್ರಭು
13. ಗಿರಿಜಾ ಕಲ್ಯಾಣ
14. ಲಾಕ್ಷಾಭವನ
15. ದಕ್ಷಾಧ್ವರ
16. ಕೀಚಕವಧೆ
17. ಗದಾಯುದ್ಧ
18. ರಾಜಸುಯಾಗ
19. ದ್ರೌಪದಿ ಸ್ವಯಂವರ

ಸಂಗ್ರಹಗಳು

20. ಗಾದೆಗಳ ಮಹಾಕೋಶ (ಭಾಗ-1)
21. ಗಾದೆಗಳ ಮಹಾಕೋಶ (ಭಾಗ-2)
22. ಕನ್ನಡ ಸಾಹಿತ್ಯ ಕೌಸ್ತುಭ
23. ಗದ್ಯ ಮಣಿಮಾಲ
24. ಸಾಹಿತ್ಯ ಕೌಮುದಿ
25. ಗಮಕ-ಗಮಕಿ

ವಿಮರ್ಶೆ

26. ಹರಿಹರನ ಗಿರಿಜಾ ಕಲ್ಯಾಣ

ನಾಟಕ

27. ಭಂಡಾಟ ಬದುಕಿಸಿತು,
    ಕೇಣ ಕೆಡಿಸಿತು (ಪ್ರಹಸನ)

ಅಪ್ರಕಟಿತ ಕೃತಿಗಳು

1. ರಾಮಾಯಣ ರೂಪಕಗಳು
2. ಗಾದೆ ರಾಮಾಯಣ
3. ಗಾದೆಭಾರತ
4. ಗಾದೆಗಳ ಪೌರಾಣಿಕ ಕಥೆಗಳು
5. ಗಾದೆಗಳ ಪ್ರಹಸನಗಳು
6. ಗಾದೆಗಳ ವಿಶ್ವರೂಪ.

* * *

ಪ್ರಾತ: ಸ್ಮರಣೀಯರಾದ ಹ. ಮ. ರಾಮಾರಾಧ್ಯರು ಕನ್ನಡದಲ್ಲಿ ಅತ್ಯಧಿಕ ಸಂಖ್ಯೆಯ ಗಾದೆಗಳನ್ನು ಸಂಗ್ರಹಿಸಿದ ಏಕೈಕ ಸಾಹಸಿ. ಜೀವನದ ಬಹುಭಾಗವನ್ನು ಗಾದೆಗಳ ಸಂಗ್ರಹಕ್ಕೇ ಮೀಸಲಿಟ್ಟು ಧನ್ಯರಾದ ಮಹನೀಯರು. ಗಾದೆಗಳ ಸಂಗ್ರಹಕ್ಕೆ ಅವರು ಪಟ್ಟ ಶ್ರಮ, ಅನುಸರಿಸಿದ ಕ್ರಮ ಅನುಪಮವಾದದ್ದು. ಗಾದೆಗಳ ಸಂಗ್ರಹ, ವರ್ಗೀಕರಣ, ಅರ್ಥವಿವರಣೆ, ಅನ್ಯ ಭಾಷಿಕ ಗಾದೆಗಳ ತುಲನೆ, ಮೂಲಚೂಲ ಮಾಹಿತಿ ಒದಗಣೆ ಅವರಿಗೇ ಮೀಸಲಾದದ್ದು. ಗಾದೆಗಳನ್ನು ಕಥೆಗಳಿಗೆ, ರೂಪಕಗಳಿಗೆ, ಗೀತೆಗಳಿಗೆ ಬಳಸಿದ್ದು ವಿನೂತನ ಪ್ರಯೋಗ. ಗಾದೆಯೆಂದರೆ ರಾಮಾರಾಧ್ಯ, ರಾಮಾರಾಧ್ಯ ಎಂದರೆ ಗಾದೆ ಎಂಬ ಹೇಳಿಕೆಗೆ ಪಾತ್ರರಾದದ್ದು ಅವರ ಹೆಗ್ಗಳಿಕೆ. ಸೃಜನಶೀಲ ಸಾಹಿತಿಯೂ ಆದ ಅವರು ಸಂಗೀತ, ನಾಟಕ, ಗಮಕ, ಹರಿಕಥೆ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲೂ ಸೇವೆ ಸಲ್ಲಿಸಿದ್ದಾರೆ.

ಜನಪ್ರಿಯ ವಾಗ್ಮಿ, ವಿದ್ವಾಂಸ ಪ್ರೊ. ಜಿ. ಅಶ್ವತ್ಥನಾರಾಯಣರು ಈ ಗ್ರಂಥವನ್ನು ಬರೆದಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು